ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ

NIMMURU SUDDI

ಸಂಪಾದಕರು: ಸುಂದರ್

Editor : Sundar

ಏಕ ಕಾಲಕ್ಕೆ
ಬಳ್ಳಾರಿ,
ಕೊಪ್ಪಳ,
ಯಾದಗಿರಿ,
ರಾಯಚೂರು,
ಕಲಬುರ್ಗಿ,
ಬೀದರ,
ವಿಜಯನಗರ
ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 281 RNI Number : KNKAN/25/A2770 25-10-2026 Sunday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ:281 ರಾಯಚೂರು 25-10-2026 ರವಿವಾರ ಪುಟ 04 ಬೆಲೆ ರೂ.2/- Postal Reg Number:RCR/L/RNP/117/2026-28

ಅ.25ರಿಂದ ನವೆಂಬರ್ 4ರವರೆಗೆ ಗಣೇಕಲ್ ಜಲಾಶಯಕ್ಕೆ ನೀರು ತುಂಬಿಸಲು ಕ್ರಮ: ಜಿಲ್ಲಾಧಿಕಾರಿ ಪೂವಿತಾ ಎಸ್

ರಾಯಚೂರು,ಅ.25

ರಾಯಚೂರು ಜಿಲ್ಲೆಯ ಗಣೇಕಲ್‌ಸಮತೋಲನ ಜಲಾಶಯವನ್ನು ತುಂಬಿಸಲು ಅಕ್ಟೋಬರ್ 25ರ ಬೆಳಿಗ್ಗೆ 8ರಿಂದ ನವೆಂಬರ್ 4ರ ಬೆಳಿಗ್ಗೆ 8ರವರೆಗೆ ಸರತಿಪ್ರಕಾರ3 ದಿನಗಳಿಗೆ ದೊಡ್ಡ ವಿತರಣಾ ಕಾಲುವೆಗಳನ್ನು ಅರ್ಧ ದಷ್ಟು ಬಂದ್ ಮಾಡಿ ಉಳಿದವಿತರಣಾಕಾಲುವೆಗಳನ್ನು ಸಂಪೂರ್ಣ ಬಂದ್ ಮಾಡಿ ಕೆರೆತುಂಬಿಸಲುಕ್ರಮಕೈಗೊಳ್ಳಲಾಗುತ್ತಿದೆ ಎಂದು ಜಿಲ್ಲಾಧಿಕಾರಿಗಳಾದ ಪೂವಿತಾ ಎಸ್. ಅವರು ಹೇಳಿದರು.



ಅಕ್ಟೋಬರ್ 25ರ ಶನಿವಾರ ದಂದು ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾ ಗಿದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ತುಂಗಭದ್ರಾ ಜಲಾಶಯದಲ್ಲಿರುವ ಪ್ರಸ್ತುತ ನೀರಿನ ಲಭ್ಯತೆಗೆ ಅನುಗುಣವಾಗಿ ತುಂಗಭದ್ರ ಎಡದಂಡೆ ಮುಖ್ಯ ಕಾಲುವೆಯ ಮೈಲ್108ರಲ್ಲಿಇರುವ ಕೆರೆಗಳನ್ನು ತುಂಬಿಸಲು ಪ್ರತಿ ವಿಭಾಗದಲ್ಲಿ ಸುಮಾರು 200 ಕ್ಯೂಸೆಕ್ಸ್ ನೀರನ್ನು ಹೆಚ್ಚಿಸಿ ಗಣೇಕಲ್ ಕೆರೆಗೆ ನೀರು ತುಂಬಿಸಲಾಗುತ್ತದೆ. ಗಣೇಕಲ್ಲು ಭಾಗದಲ್ಲಿ ರೈತರಿಗೆ ನೀರಾವರಿಗೆ ಒಂದು ರೊಟೇಶನ್ ನೀರು ಕೊಡಲಾಗುತ್ತದೆ. ಕುಡಿಯುವ ನೀರಿನ ಎಲ್ಲಾ ಕೆರೆಗಳನ್ನು ತುಂಬಿಸಿದರೆ ಕೊನೆಗೆ ಸುಮಾರು 15 ರಿಂದ 16 ಅಡಿ ನೀರು ಉಳಿಯಲಿದ್ದು, ಅದನ್ನು ಮುಂದಿನ ಡಿಸೆಂಬರ್‌ನಲ್ಲಿ ಕುಡಿಯುವ ನೀರು ನೀಡಲು ಸಾಲುತ್ತದೆ ಎಂದರು.

ಜಿಲ್ಲೆಯ ಗಣೇಕಲ್ ಕೆರೆ ತುಂಬಿದ ಮೇಲೆ ಸಿಂಧನೂರು, ಮಸ್ಕಿ, ಮಾನ್ವಿ ಹಾಗೂ ಅರಕೆರೆ ಭಾಗದ ಕುಡಿಯುವ ನೀರಿನ ಕೆರೆಗಳನ್ನು ಗರಿಷ್ಠ 13 ರಿಂದ 14 ಅಡಿಯೊಳಗೆ ತುಂಬಿಸಿಕೊಳ್ಳಬೇಕಾಗುತ್ತದೆ. ಕಡೆ 5-6 ದಿನಗಳು ಇರಿಗೇಷನ್‌ಗೆ ಬರುವ ನೀರನ್ನು ಮಧ್ಯದಲ್ಲೂ ನೀರು ತೆಗೆದುಕೊಳ್ಳುತ್ತಿರುವವರ ಕ್ಯೂಸೆಕ್ಸ್ ಕಡಿಮೆ ಮಾಡಿ ಸಮರ್ಪಕವಾಗಿ ಹಂಚಲಾಗುತ್ತದೆ ಎಂದರು.

ಮುಂಚೆ4,200-100 ಕ್ಯೂಸೆಕ್ಸ್ ಮೇಲಿಂದ ಓಪನ್ ಮಾಡುತ್ತಿದ್ದು, ಈಗ 3,800 ಕ್ಯೂಸೆಕ್ಸ್ ಗೆ ಇಳಿಸಲಾಗಿದೆ. ಕುಡಿಯುವ ನೀರಿಗೂ ಸಮಾನಾಂತರವಾಗಿ ತುಂಬುತ್ತಿರುವುದರಿಂದ ಇರಿಗೇಷನ್‌ಗೆ ಸ್ವಲ್ಪ ನೀರು ಕಡಿಮೆಯಾಗುತ್ತದೆ. ಸಾಧ್ಯವಾದಷ್ಟು ಮಟ್ಟಿಗೆ ಅಪ್ಪರ್ ಮತ್ತು ಇಂಟರ್ನಲ್ ಡಿಸ್ಟ್ರಿಬ್ಯೂಟರಿಸ್ ಹಾಗೂ ಲೋಯರ್ ರೊಟೇಶನ್‌ಗೂ ನೀರು ನೀಡುವ ಕುರಿತು ಎಲ್ಲಾ ಅಧಿಕಾರಿಗಳ ಜೊತೆ ಸಭೆ ನಡೆಸಿ ಚರ್ಚಿಸಲಾಗಿದೆ. ಕ್ಯಾನಲ್ ಪೂರ್ತಿ ನಿಷೇಧ ಜಾರಿ ಮಾಡಲಾಗುತ್ತದೆ ಎಂದರು.

ರೈತರಿಗೆ ಮನವಿ: ಜಿಲ್ಲೆಯ ಎಲ್ಲಾ ರೈತರು, ಮುಖಂಡರು ಹಾಗೂ ಜನಪ್ರತಿನಿಧಿಗಳು ಐಸಿಸಿಯಲ್ಲಿ ಭಾಗವಹಿಸಿದ್ದು, ಎಲ್ಲರೂ ಸಹಕಾರ ನೀಡಬೇಕು. ಕುಡಿಯುವ ನೀರಿನ ಜೊತೆಗೆ ಮುಂದೆ ತೀವ್ರ ಸಮಸ್ಯೆಯಾಗುವ ಸಾಧ್ಯತೆಯಿರುವುದರಿಂದ ರಸ್ತೆ ತಡೆ ಅಥವಾ ಇತರೆ ಪ್ರತಿಭಟನೆಗಳನ್ನು ಮಾಡದೆ ಅಧಿಕಾರಿಗಳೊಂದಿಗೆ ರೈತರು ಸಹಕರಿಸುವಂತೆ ಜಿಲ್ಲಾಧಿಕಾರಿಗಳ ಮನವಿ ಮಾಡಿದರು.

ಇದೇ ಸಂದರ್ಭದಲ್ಲಿ ನೀರಾವರಿ ಇಲಾಖೆಯ ಅಧಿಕಾರಿಗಳು, ಜಿಲ್ಲಾಧಿಕಾರಿಗಳ ಕಚೇರಿಯ ಅಧಿಕಾರಿಗಳು ಇದ್ದರು.

ಉದ್ರಿ ನೀಡಲು ನಿರಾಕರಿಸಿದ್ದಕ್ಕೆ ಹೋಟೆಲ್ ಮಾಲೀಕನ ಬರ್ಬರ ಹತ್ಯೆ-ರಾಯಚೂರಿನ ಎಲ್‌ಬಿಎಸ್ ನಗರದಲ್ಲಿ ಆತಂಕ

ರಾಯಚೂರು

ಉದ್ರಿ (ಸಾಲ) ನೀಡಲು ನಿರಾಕರಿಸಿದ್ದಕ್ಕೆ ಹೋಟೆಲ್ ಮಾಲೀಕನನ್ನು ಚಾಕುವಿನಿಂದ ಇರಿದು ಹತ್ಯೆ ಮಾಡಿರುವ ಘಟನೆ ರಾಯಚೂರು ನಗರದ ಎಲ್‌ಬಿಎಸ್ ನಗರದ ಕ್ರೌನ್ ಬೇಕರಿ ಬಳಿ ಶನಿವಾರ ಮಧ್ಯಾಹ್ನ ಸುಮಾರು 2 ಗಂಟೆಗೆ ನಡೆದಿದೆ.



ಮೃತರನ್ನು ಬಾಪೂರು ನರಸಿಂಹ (38) ಎಂದು ಗುರುತಿಸಲಾಗಿದೆ. ಎಲ್‌ಬಿಎಸ್ ನಗರದ ಕ್ರೌನ್ ಬೇಕರಿ ಬಳಿ ಹಲವು ವರ್ಷಗಳಿಂದ ಟೀ ಶಾಪ್ ಹಾಗೂ ಹೋಟೆಲ್ ನಡೆಸುತ್ತಿದ್ದ ನರಸಿಂಹ ಅವರು ಎಂದಿನಂತೆ ಶನಿವಾರವೂ ವ್ಯಾಪಾರದಲ್ಲಿ ತೊಡಗಿದ್ದರು. ಈ ವೇಳೆ ಹೋಟೆಲ್‌ಗೆ ಬಂದ ಆರೋಪಿ ಹಣ ನೀಡದೆ ಹೋಟೆಲ್ ವಸ್ತುಗಳನ್ನು ಕೇಳಿದ್ದಾನೆ. ನರಸಿಂಹ ನಿರಾಕರಿಸಿದಾಗ ಕುತ್ತಿಗೆಗೆ ಚಾಕುವಿನಿಂದ ಇರಿದು ಹತ್ಯೆ ಮಾಡಿದ್ದಾನೆ ಎಂದು ಸ್ಥಳೀಯರು ತಿಳಿಸಿದ್ದಾರೆ.

ಘಟನಾ ಸ್ಥಳಕ್ಕೆ ಡಿವೈಎಸ್‌ಪಿ ಶಾಂತವೀರ, ಸಿಪಿಐ ಉಮೇಶ್ ಕಾಂಬ್ಳೆ ಹಾಗೂ ಮಾರ್ಕೆಟ್ ಯಾರ್ಡ್ ಪೊಲೀಸ್ ಠಾಣೆಯ ಪಿಎಸ್‌ಐ ಇಸಾಕ್ ಭೇಟಿ ನೀಡಿ ಪರಿಶೀಲನೆ ನಡೆಸಿ ತನಿಖೆ ಆರಂಭಿಸಿದ್ದಾರೆ. ಆರೋಪಿಗಾಗಿ ಶೋಧ ಕಾರ್ಯ ಮುಂದುವರಿದಿದೆ.

ಕೆಪಿಎಸ್‌ಸಿ ಅಕ್ರಮ ಪ್ರಕರಣ : ಐಎಎಸ್ ಅಧಿಕಾರಿ ಜ್ಞಾನೇಂದ್ರ ಕುಮಾರ್ ವಿರುದ್ಧ ಕಾನೂನು ಕ್ರಮಕ್ಕೆ ಸಿಎಂ ಅನುಮತಿ

ಬೆಂಗಳೂರು, ಅ. 24-

ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ನೇಮಕಾತಿ ಪ್ರಕ್ರಿಯೆಯಲ್ಲಿನ ಅಕ್ರಮಗಳಿಗೆ ಸಂಬಂಧಿಸಿದ ಪ್ರಕರಣದಲ್ಲಿ ಅಮಾನತುಗೊಂಡಿರುವ ಐಎಎಸ್ ಅಧಿಕಾರಿ ಜ್ಞಾನೇಂದ್ರ ಕುಮಾರ್ ಗಂಗ್ವಾರ್ ವಿರುದ್ಧ ಕಾನೂನು ಕ್ರಮ ಜರುಗಿಸಲು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅನುಮತಿ ನೀಡಿದ್ದಾರೆ .

ನೇಮಕಾತಿ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಸೆಪ್ಟೆಂಬರ್‌ನಲ್ಲಿ ಗಂಗ್ವಾರ್ ಅವರನ್ನು ಅಮಾನತುಗೊಳಿಸಿತ್ತು.ಜ್ಞಾನೇಂದ್ರ ಕುಮಾರ್ ಗಂಗ್ವಾ,ರ್ ವಿರುದ್ಧದ



ಭ್ರಷ್ಟಾಚಾರ ಪ್ರಕರಣಕ್ಕೆ ಸಂಬಂಧಿಸಿದ ಕಡತ ಮತ್ತು ಅದರಲ್ಲಿರುವ ದಾಖಲೆಗಳನ್ನು ಪರಿಶೀಲಿಸಿದ್ದೇನೆ. ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ (ಬಿಎನ್‌ಎಸ್‌ಎಸ್), 2023ರ ಸೆಕ್ಷನ್ 218ರ ಅಡಿಯಲ್ಲಿ ಅವರ ವಿರುದ್ಧ ವಿಚಾರಣೆ ನಡೆಸಲು ಅನುಮತಿ ನೀಡಲಾಗಿದೆ,ಎಂದು ಶಿವಕುಮಾರ್ ತಮ್ಮ ಆದೇಶದಲ್ಲಿ ತಿಳಿಸಿದ್ದಾರೆ.

ಗಂಗ್ವಾರ್ ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ. ಪ್ರಕರಣದ ಅಕ್ರಮಗಳ ಕುರಿತು ಅಪರಾಧ ತನಿಖಾ ಇಲಾಖೆ (ಸಿಐಡಿ) ತನಿಖೆ ನಡೆಸುತ್ತಿದ್ದು, ಜಾರಿ ನಿರ್ದೇಶನಾಲಯವೂ (ಇಡಿ) ಪ್ರತ್ಯೇಕ ತನಿಖೆ ಕೈಗೊಂಡಿದೆ.ಪಶುವೈದ್ಯಾಧಿಕಾರಿಗಳ ನೇಮಕಾತಿ ಪರೀಕ್ಷೆಗೆ ಸಂಬಂಧಿಸಿದ ಅಕ್ರಮಗಳ ಆರೋಪದ ಹಿನ್ನೆಲೆಯಲ್ಲಿ ಸಿಐಡಿ ಆಗಸ್ಟ್ 29ರಂದು ಗಂಗ್ವಾರ್ ಅವರನ್ನು ಬಂಧಿಸಿತ್ತು. ಅವರು 2024ರ ಫೆಬ್ರವರಿಯಿಂದ 2026ರ ಮಾರ್ಚ್‌ವರೆಗೆ ಕೆಪಿಎಸ್‌ಸಿಯ ಪರೀಕ್ಷಾ ನಿಯಂತ್ರಕರಾಗಿ

3ನೇಯ ಪುಟಕ್ಕೆ

ಸಿಎಂ ಡಿಕೆಶಿ ಸಭೆಯಲ್ಲಿ ಸ್ಪಂದನೆ ಸಿಗದಿದ್ದರೆ ಅ.27ಕ್ಕೆ ಕರ್ನಾಟಕ ಬಂದ್‌ಗೆ ಕರೆ: ಚೂನಪ್ಪ ಪೂಜಾರಿ ಎಚ್ಚರಿಕೆ!

ಬೆಳಗಾವಿ: ಅ.26 ರಂದು ಬೆಳಗಾವಿಯಲ್ಲಿ ಸಿಎಂ ಡಿ.ಕೆ. ಶಿವಕುಮಾರ್ ನಡೆಸಲಿರುವ ಸಭೆಯಲ್ಲಿ ಕಬ್ಬು ಬೆಳೆಗಾರರ ಬೇಡಿಕೆ ಈಡೇರುವ ಭರವಸೆಯಿದೆ. ಒಂದು ವೇಳೆ ಸಿಎಂ ಸಭೆಯಲ್ಲಿ ಸ್ಪಂದನೆ ಸಿಗದಿದ್ದರೆ, ಅ.27 ರಂದು ಕರ್ನಾಟಕ ಬಂದ್‌ಗೆ ಕರೆ ಕೊಡುತ್ತೇವೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ರಾಜ್ಯಾಧ್ಯಕ್ಷ ಚೂನಪ್ಪ ಪೂಜಾರಿ ಹೇಳಿದರು.

ಬೆಳಗಾವಿಯಲ್ಲಿ ಇಂದು ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಇದೇ ಸೋಮವಾರ ಬೆಳಗಾವಿ ಸುವರ್ಣ ವಿಧಾನ



ಸೌಧದಲ್ಲಿ ಮುಖ್ಯಮಂತ್ರಿಗಳು ಸಕ್ಕರೆ ಕಾರ್ಖಾನೆ ಮಾಲೀಕರ ಸಭೆ ಕರೆದಿದ್ದಾರೆ. ಅವತ್ತೆ ಮಧ್ಯಾಹ್ನ ರೈತ ಮುಖಂಡರ ಜೊತೆಗೂ ಸಭೆ ನಡೆಸಲಿದ್ದಾರೆ. ಮುಖ್ಯಮಂತ್ರಿಗಳು ನಮ್ಮ ನಿರೀಕ್ಷೆಯಂತೆ ಆರನೇ ಗ್ಯಾರಂಟಿ ಆಗಿ ರಾಜ್ಯ ಸರ್ಕಾರ ಪ್ರತಿ ಟನ್‌ಗೆ 1 ಸಾವಿರ ರೂ. ಘೋಷಣೆ ಮಾಡಬೇಕು. ಸಕ್ಕರೆ ಕಾರ್ಖಾನೆಗಳಲ್ಲಿ ತೂಕದ ಮೋಸ ತಡೆಯಲು 500 ಕೋಟಿ ಮೀಸಲಿಡಬೇಕು. ಬೆಳಗಾವಿಯಲ್ಲಿರುವ ಸಕ್ಕರೆ ಆಯುಕ್ತ ಕಚೇರಿಗೆ ಆಯುಕ್ತರನ್ನು ನೇಮಕ ಮಾಡುವ ನಿಟ್ಟಿನಲ್ಲಿ ಗಟ್ಟಿ ನಿರ್ಧಾರ ಪ್ರಕಟಿಸಬೇಕು ಎಂದು ಒತ್ತಾಯಿಸಿದರು.

ಸಿಎಂ ಕರೆದಿರುವ ಸಭೆಯಲ್ಲಿ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಅವರು ಕೂಡ ಭಾಗವಹಿಸಬೇಕು. ಜೊತೆಗೆ ಮೊನ್ನೆ ಹುಬ್ಬಳ್ಳಿಯಲ್ಲಿ ನಡೆದ ಸಭೆಯಲ್ಲಿ ಭರವಸೆ ನೀಡಿದಂತೆ, ತಕ್ಷಣವೇ ಕೇಂದ್ರ ಸಚಿವರು ಎಲ್ಲ ಕಾರ್ಖಾನೆಗಳ ಮಾಲೀಕರ ಸಭೆ ಕರೆದು ಎಂಎಸ್ಪಿ ಹೆಚ್ಚಳ ಮಾಡಬೇಕು. ಕಾರ್ಖಾನೆಗಳಿಂದ ಪ್ರತಿ ಟನ್‌ಗೆ 4,500 ರೂ. ಕೊಡಿಸಬೇಕು ಎಂದು ಆಗ್ರಹಿಸಿದರು.

ಇದೇ ಅಕ್ಟೋಬರ್ 25ರಿಂದ ಗುರ್ಲಾಪುರದಲ್ಲಿ ಸಾಂಕೇತಿಕ ಪ್ರತಿಭಟನೆ ಆರಂಭಿಸುತ್ತೇವೆ. ಅ.26ರಂದು ಸಿಎಂ ನೇತೃತ್ವದ ಸಭೆಯಲ್ಲಿ ನಮಗೆ ಸ್ಪಂದನೆ ಸಿಗುವ ಭರವಸೆಯಿದೆ. ಒಂದು ವೇಳೆ ಬೇಡಿಕೆಗೆ ಸ್ಪಂದನೆ ಸಿಗದಿದ್ದರೇ ಉಗ್ರ ಹೋರಾಟ ಮಾಡುತ್ತೇವೆ. ಅ.27 ರಂದು ಅನಿವಾರ್ಯವಾಗಿ ಕರ್ನಾಟಕ ಬಂದ್ ಕರೆ ಕೊಡಬೇಕಾಗುತ್ತದೆ. ರೈತರ ಜೊತೆಗೆ ಎಲ್ಲ ಸಾರ್ವಜನಿಕರು ಬೀದಿಗಿಳಿದು ಹೋರಾಡಬೇಕಾಗುತ್ತದೆ ಎಂದು ಚೂನಪ್ಪ ಪೂಜಾರಿ ಎಚ್ಚರಿಸಿದರು.

ಕಾರ್ಖಾನೆ ಮಾಲೀಕರು ಕಳೆದ 9 ವರ್ಷಗಳಿಂದ ಎಂಎಸ್ಪಿ ಹೆಚ್ಚಿಸುವ ವಿಚಾರವನ್ನು ತಾರ್ಕಿಕ ಅಂತ್ಯಕ್ಕೆ ತೆಗೆದುಕೊಂಡು ಹೋಗಿರಲಿಲ್ಲ.

3ನೇಯ ಪುಟಕ್ಕೆ

ಚಂದ್ರಮೌಳೇಶ್ವರ ರಸ್ತೆ 80 ಅಡಿ ಅಗಲೀಕರಣಕ್ಕೆ ಶೀಘ್ರದಲ್ಲೆ ಪ್ರಾರಂಭ : ಆಯುಕ್ತ ಮೊಹಪಾತ್ರ

ರಾಯಚೂರು,ಆ.23-

ಚಂದ್ರಮೌಳೇಶ್ವರ ವೃತ್ತದಿಂದ ಗಂಜ್ ವೃತ್ತದ ವರೆಗೆ 80 ಅಡಿ ರಸ್ತೆ ಅಗಲೀಕರಣ ಅತೀ ಶೀಘ್ರದಲ್ಲೆ ಪ್ರಾರಂಭ, ರಸ್ತೆ ಕಾಮಗಾರಿಗಾಗಿ ಪರಿಶೀಲಿಸಿದ ಮಹಾನಗರ ಪಾಲಿಕೆ ಆಯುಕ್ತ ಜುಬೇನ್ ಮೋಹಪಾತ್ರ, ರಸ್ತೆ ಅತಿಕ್ರಮಣ ಮಾಡಿದವರಿಗೆ ಕಾನೂನು ಪ್ರಕಾರ ನೋಟಿಸ್, ಪಿ. ಡಬ್ಲ್ಯೂ.ಡಿ., ಕಂದಾಯ ಇಲಾಖೆಯ ಅಧಿಕಾರಿಗಳು ಸಾಥ್.




ನಂತರ ಮಾಧ್ಯಮದವರೊಂದಿಗೆ ಮಾತನಾಡಿದ ಆಯುಕ್ತರು ಚಂದ್ರಮೌಳೇಶ್ವರ ವೃತ್ತದಿಂದ ಗಂಜ್ ವೃತ್ತದವರೆಗೆ ರಸ್ತೆ ಅಗಲೀಕರಣಕ್ಕಾಗಿ ಕಾಮಗಾರಿ ಸದ್ಯದಲ್ಲೆ ಪ್ರಾರಂಭವಾಗಲಿದ್ದು ಆ ಯಾ ಅಂಗಡಿ ಮಾಲಿಕರನ್ನು ಬೇಟಿ ನೀಡಿ ಚರ್ಚಿಸಿ ರಸ್ತೆ ಅತಿಕ್ರಮಣ ಮತ್ತು ರಸ್ತೆ ಸ್ವಚ್ಚತೆ ಹಾಗೂ ಶಕ್ತಿನಗರ ಬಸ್ ನಿಲ್ದಾಣದ ಹತ್ತಿರ ರಾಜಕಾಲುವೆಯಲ್ಲಿ ಇರುವ ಡೇಂಜರ್ ಪೈಂಟ್ ಬಗ್ಗೆ ಈಗಾಗಲೇ ಕೆಲವು ಸಾರ್ವಜನಿಕರು ರೀಲ್ಸ್ ಮೂಲಕ ನಮ್ಮ ಗಮನಕ್ಕೆ ತಂದಿದ್ದಾರೆ ಆದಕಾರಣ ಈ ಕಾಮಗಾರಿಯ ಟೆಂಡರ್ ಕರೆಯ ಲಾಗಿದ್ದು ಮಹಾನಗರ ಪಾಲಿಕೆ ಮತ್ತು ಪಿ.ಡಬ್ಲ್ಯೂ.ಡಿ. ಇಲಾಖೆಗಳ ಸಹಭಾಗಿತ್ವದಲ್ಲಿ ಕಾಮಗಾರಿಯನ್ನು ಪ್ರಾರಂಭಿಸಲಾಗುತ್ತದೆ, ಸಾರ್ವಜನಿ ಕರೂ ಸಹಿತ ರಸ್ತೆ ಯಾವಾಗ ಅಗಲೀ ಕರಣ ಆಗುತ್ತೆ ಎಂಬ ಕಾತುರದಿಂದ ನಮಗೆ ತುಂಬಾ ಸ್ಪಂಧಿಸುತ್ತಿದ್ದಾರೆ,

ಒಂದು ಒಂದುವರೆ ತಿಂಗಳಲ್ಲಿ ಕಾಮಗಾರಿ ಆರಂಭಿಸಲಾಗುವುದು, ರಸ್ತೆ ಅತಿಕಮಣ ಮಾಡಿಕೊಂಡವರಿಗೆ ಕಾನೂನು ಪ್ರಕಾರ ನೋಟೀಸ್ ಕೊಡಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಪಿ. ಡಬ್ಲ್ಯೂ.ಡಿ., ಕಂದಾಯ ಇಲಾಖೆಯ ಅಧಿಕಾರಿಗಳು, ಮಹಾನಗರ ಪಾಲಿಕೆಯ ಅಧಿಕಾರಿಗಳು ಹಾಗೂ ಸಿಬ್ಬಂಧಿಗಳು ಇದ್ದರು.

ರೈತ ಉತ್ಪಾದಕ ಕಂಪನಿಗಳ ನಿರ್ವಹಣೆ, ವ್ಯವಹಾರ ಅಭಿವೃದ್ಧಿ ಕುರಿತು ತರಬೇತಿ ಕಾರ್ಯಾಗಾರ

ರಾಯಚೂರು: ನಗರದ ಕೃಷಿ ವಿಜ್ಞಾನ ಕೇಂದ್ರ, ರಾಯಚೂರು ಮತ್ತು ಬೆಂಗಳೂರಿನ ರೈತ ಉತ್ಪಾದಕ ಕಂಪನಿಗಳ ಉತ್ಕೃಷ್ಟ ಕೇಂದ್ರದ ವತಿಯಿಂದ ಶುಕ್ರವಾರ ಕೃಷಿ ವಿಜ್ಞಾನ ಕೇಂದ್ರದಲ್ಲಿ ರೈತ ಉತ್ಪಾದಕ ಕಂಪನಿಗಳ ವ್ಯವಸ್ಥಾಪಕರು ಹಾಗೂ ನಿರ್ದೇಶಕರಿಗೆ ನಿರ್ವಹಣೆ ಮತ್ತು ವ್ಯವಹಾರ ಅಭಿವೃದ್ಧಿ ಕುರಿತು ಅರಿವು ಮೂಡಿಸುವ ಒಂದು ದಿನದ ತರಬೇತಿ ಕಾರ್ಯಾಗಾರ ನಡೆಯಿತು.



ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಸಂಶೋಧನಾ ನಿರ್ದೇಶಕ ಡಾ. ಎ. ಪ್ರಭುರಾಜ, ನಬಾರ್ಡ್‌ನ ನಿರ್ದೇಶಕ ಶ್ರೇಯಸ್, ಲಿಂಗಸುಗೂರು ವಿಭಾಗದ ಉಪ ಕೃಷಿ ನಿರ್ದೇಶಕ ಡಾ. ಮುತ್ತುರಾಜ್, ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಡಾ. ತಿಮ್ಮಣ್ಣ ನಾಯಕ ಹಾಗೂ ಬೆಂಗಳೂರಿನ ರೈತ ಉತ್ಪಾದಕ ಕಂಪನಿಗಳ ಉತ್ಕೃಷ್ಟ ಕೇಂದ್ರದ ಅಧಿಕಾರಿ ಜಯಣ್ಣ ಕಡೂರು ಅತಿಥಿಗಳಾಗಿ ಭಾಗವಹಿಸಿದ್ದರು.

ಕೃಷಿ, ತೋಟಗಾರಿಕೆ, ಹೈನುಗಾರಿಕೆ, ಪಶುಸಂಗೋಪನೆ, ಮೀನುಗಾರಿಕೆ ಸೇರಿದಂತೆ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ ಇಲಾಖೆಗಳ ವ್ಯಾಪ್ತಿಯ 50ಕ್ಕೂ ಹೆಚ್ಚು ರೈತ ಉತ್ಪಾದಕ ಕಂಪನಿಗಳ ವ್ಯವಸ್ಥಾಪಕರು ಮತ್ತು ನಿರ್ದೇಶಕರು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.

ಕಾರ್ಯಾಗಾರದಲ್ಲಿ ಸಂಶೋಧನಾ ನಿರ್ದೇಶಕ ಡಾ. ಎ.ಆರ್. ಪ್ರಭುರಾಜ ಅವರು ಕೇಂದ್ರ ಸರ್ಕಾರದ ವಿಶೇಷ ಕೃಷಿ ವಲಯ ಯೋಜನೆಯ ಕುರಿತು ವಿವರಿಸಿದರು. ಜಿಲ್ಲಾ ಪಂಚಾಯತ್‌ನ ಅಸಾದುಲ್ಲಾ ಅವರು ಪಿ.ಎಂ.ಎಫ್.ಎಂ.ಇ. ಯೋಜನೆಯ ವೈಶಿಷ್ಟ್ಯಗಳು, ಲಭ್ಯವಿರುವ ಅವಕಾಶಗಳು, ಅರ್ಜಿ ಸಲ್ಲಿಸುವ ಪ್ರಕ್ರಿಯೆ ಹಾಗೂ ಅಗತ್ಯ ದಾಖಲೆಗಳ ಸಲ್ಲಿಕೆ ಕುರಿತು ಮಾಹಿತಿ ನೀಡಿದರು.

ರಾಷ್ಟ್ರೀಯ ಇ-ಮಾರುಕಟ್ಟೆ () ವ್ಯವಸ್ಥಾಪಕ ಶಕೀಲ್ ಅಹಮದ್ ಅವರು ಮಾರುಕಟ್ಟೆ ಮಾಹಿತಿ ಹಾಗೂ ವ್ಯವಸ್ಥೆಯ ಕಾರ್ಯನಿರ್ವಹಣೆಯ ಬಗ್ಗೆ ವಿವರಿಸಿದರು. ರೈತ ಉತ್ಪಾದಕ ಕಂಪನಿಗಳ ರಾಜ್ಯ ಒಕ್ಕೂಟದ ವಲಯ ಅಧಿಕಾರಿ ಶ್ರೀನಿವಾಸ ಅವರು ಷೇರುದಾರಿಕೆ (ಶೇರ್ ಹೋಲ್ಡಿಂಗ್) ಮತ್ತು ರೈತ ಸಿರಿ ಬ್ರ್ಯಾಂಡಿಂಗ್ ಮೂಲಕ ರೈತ ಉತ್ಪಾದಕ ಕಂಪನಿಗಳಿಗೆ ದೊರೆಯಬಹುದಾದ ಅವಕಾಶಗಳ ಕುರಿತು ಮಾತನಾಡಿದರು.

ಡಿ-82 ಉಪಕಾಲುವೆಯ ನೀರಿಗಾಗಿ ರೈತರ ಧರಣಿ ಸತ್ಯಾಗ್ರಹ!



ಸಿರವಾರ,ಆ.24-

ತುಂಗಭದ್ರಾ ಎಡದಂಡೆ ನಾಲೆಯ ಡಿಸ್ಟ್ರಿಬ್ಯೂಟರ್ ನಂ. 82ರ ಉಪಕಾಲುವೆಯ ಕೆಳಭಾಗದ ರೈತರಿಗೆ ಸಮರ್ಪಕವಾಗಿ ನೀರು ಹರಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘದ ನೇತೃತ್ವದಲ್ಲಿ ರೈತರು ಧರಣಿ ಸತ್ಯಾಗ್ರಹ ನಡೆಸಿದರು.

ಡಿ-82 ಉಪಕಾಲುವೆಯ ಕೆಳಭಾಗದ ಜಮೀನುಗಳಿಗೆ ಸಮಪರ್ಕವಾಗಿ ನೀರು ತಲುಪದ ಕಾರಣ ಜೋಳದ ಬೆಳೆ ಒಣಗುವ ಆತಂಕ ಎದುರಾಗಿದೆ. ಈ ಹಿನ್ನೆಲೆಯಲ್ಲಿ ಕೆಳಭಾಗದ ರೈತರ ಜಮೀನುಗಳಿಗೆ ತಕ್ಷಣ ನೀರು ಹರಿಸಬೇಕು ಹಾಗೂ ಕನಿಷ್ಠ 10 ದಿನಗಳ ಕಾಲ ನೀರು ಪೂರೈಸಬೇಕು ಎಂದು ರೈತರು ಒತ್ತಾಯಿಸಿದರು.

ಅವೈಜ್ಞಾನಿಕ ವಾರಬಂದಿ ಪದ್ಧತಿಗೆ ಆಕ್ರೋಶ

ಉಪಕಾಲುವೆಯಲ್ಲಿ ಜಾರಿಯಲ್ಲಿರುವ ವಾರಬಂದಿ ಪದ್ಧತಿಯಿಂದ ಮೇಲ್ಭಾಗದ ರೈತರಿಗೆ ಹೆಚ್ಚಿನ ಅನುಕೂಲವಾಗುತ್ತಿದ್ದು, ಕೆಳಭಾಗದ ರೈತರಿಗೆ ಸಮರ್ಪಕವಾಗಿ ನೀರು ದೊರೆಯುತ್ತಿಲ್ಲ ಎಂದು ರೈತ ಸಂಘ ಆರೋಪಿಸಿದೆ. ಅಚ್ಚುಕಟ್ಟು ಪ್ರದೇಶದ ಜಮೀನುಗಳಿಗೆ ಎಕರೆವಾರು ಸಮಾನವಾಗಿ ನೀರು ಹಂಚಿಕೆ ಮಾಡಿ, ವೈಜ್ಞಾನಿಕ ರೊಟೇಷನ್ ಪದ್ಧತಿ ಜಾರಿಗೊಳಿಸಬೇಕು ಎಂದು ಆಗ್ರಹಿಸಿದೆ.

3ನೇಯ ಪುಟಕ್ಕೆ

ಚಾಕಲೇಟ್ ಖರೀದಿ ನೆಪದಲ್ಲಿ ಏಳು ತೊಲೆ ಬಂಗಾರದ ತಾಳಿ ಕಳವು

ಯರಗೇರಾ, ತಾಲೂಕಿನ ಯರಗೇರಾ ಗ್ರಾಮದಲ್ಲಿ ಕಿರಾಣಿ ಅಂಗಡಿ ಚಾಕ ಲೇಟ್ ಖರೀದಿ ನೆಪದಲ್ಲಿ ಬಂದು ಅಂಗಡಿಯಲ್ಲಿ ಮಹಿಳೆಯ ಏಳು ತೊಲೆ ಬಂಗಾದ ತಾಳಿಯನ್ನು ಕದ್ದು ಪರಾರಿಯಾದ ಘಟನೆ ಜರುಗಿದೆ.

ಯರಗೇರಾ ಗ್ರಾಮದ ಮಂತ್ರಾಲಯ ಮುಖ್ಯ ರಸ್ತೆಯಲ್ಲಿರುವ ಕಿರಾಣಿ ಅಂಗಡಿಯಲ್ಲಿದ್ದ ಸೂರ್ಯಪ್ರಭಾ ಎಂಬ ತಾಳಿಯನ್ನು ಕದ್ದು ಪರಾರಿಯಾಗಿದ್ದು ಗ್ರಾಮದಲ್ಲಿ ಆತಂಕ ಮೂಡಿಸಿದೆ. ಇಬ್ಬರು ಯುವಕರು ಬಂದು ಚಾಕಲೇಟ್ ಕೊಡುವಂತೆ ಕೇಳಿದಾಗ ನೀಡಲು ಹೋದಾಗ ಚಿನ್ನದ ಸರ ಕದ್ದು ಓಡಿ ಹೋಗಿದ್ದಾರೆ. ಹಾಡುಹಗಲೇ ಜನ ಸಂದಣಿ ಪ್ರದೇಶದಲ್ಲಿ ಕಳ್ಳತನ ನಡೆದಿರುವದು ಗ್ರಾಮದಲ್ಲಿ ಭೀತಿ ಉಂಟು ಮಾಡಿದೆ.

ಈಶಾನ ಕರ್ನಾಟಕ ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆಯಲ್ಲಿ. 766. ಮತಗಳ ಚಲಾವಣೆ

ಸಿಂಧನೂರು :

24-10-2026 ಈಶಾನ್ಯ ಕರ್ನಾಟಕ ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆ ಶುಕ್ರವಾರ ನಗರದ ಮಿನಿ ವಿಧಾನಸೌಧದ ಕಚೇರಿಯಲ್ಲಿ. ಮತದಾನ ಪ್ರಕ್ರಿಯೆ ಶಾಂತಿಯುತ 'ವಾಗಿ ನಡೆಯಿತು. ಬೆಳಿಗ್ಗೆ 8:00. ಗಂಟೆಯಿಂದಲೇ ಮತದಾನ ಪ್ರಕ್ರಿಯೆ ಆರಂಭವಾಯಿತು. ಮಿನಿ ವಿಧಾನಸೌಧದ ಕಚೇರಿಯ ಮುಂಭಾಗದಲ್ಲಿ ಶಾಮಿಯಾನ ಟೆಂಟ್ ಹಾಕಿಕೊಂಡು. ಕಾಂಗ್ರೆಸ್ ಅಭ್ಯರ್ಥಿ ಶರಣಪ್ಪ ಮಟ್ಟೂರ್ ಪರ ಬ್ಲಾಕ್ ಕಾಂಗ್ರೆಸ್. ಗ್ರಾಮೀಣ ಅಧ್ಯಕ್ಷ. ಎಮ್ ಲಿಂಗಪ್ಪ ಧಡಸುಗೂರು. ನಗರ ಘಟಕದ ಅಧ್ಯಕ್ಷ. ಖಾಜಿ ಮಲಿಕ್ ವಕೀಲ. ಪ್ರಧಾನ ಕಾರ್ಯದರ್ಶಿ ಅನಿಲ್ ಕುಮಾ.ರ್ ಮತ್ತಿತರ ಮುಖಂಡರು. ಮತ್ತು ಬಿಜೆಪಿ ಅಭ್ಯರ್ಥಿ ಶಶಿಲ್ ನಮೋಶಿ ಪರ ಬಿಜೆಪಿ ನಗರ ಮೋರ್ಚಾದ ಅಧ್ಯಕ್ಷ. ಸಿದ್ದರಾಮೇಶ್ ಮನ್ನಾಪುರ. ಪ್ರಧಾನ ಕಾರ್ಯದರ್ಶಿ ರವಿಕುಮಾರ್ ಉಪ್ಪಾರ ಸಿದ್ದಲಿಂಗಯ್ಯ ಸ್ವಾಮಿ ಹಾಗೂ ಅನೇಕ ಕಾರ್ಯಕರ್ತರು ಮತದಾರರ ಪಟ್ಟಿ ಹಿಡಿದುಕೊಂಡು ಮತದಾರರಿಗೆ ಗುರುತಿನ ಸಂಖ್ಯೆ ಹುಡುಕಿಕೊಟ್ಟರು. ನಂತರ ಒಳಗಡೆ ತೆರಳಿ ಸ್ವರಾಜ್ ಸಾಲಿನಲ್ಲಿ ನಿಂತು ಶಿಕ್ಷಕರು ಮತದಾನದ ಹಕ್ಕುಚಲಾಯಿಸಿದರು. ಶಾಸಕ ಹಂಪನಗೌಡ ಬಾದರ್ಲಿ. ವಿಧಾನಪರಿಷತ್ ಸದಸ್ಯ ಬಸನಗೌಡ ಬಾದರ್ಲಿ. ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ. ಬಾಬುಗೌಡ ಬಾದರ್ಲಿ. ಮಾಜಿ ಸಂಸದರಾದ. ಕೆ. ವಿರೂಪಾಕ್ಷಪ್ಪ. ಬಿಜೆಪಿ ಮುಖಂಡರಾದ. ಕೆ. ಕರಿಯಪ್ಪ. ಪಿ ಕಾರ್ಡ್ ಬ್ಯಾಂಕ್ ಅಧ್ಯಕ್ಷರಾದ. ಎಂ ದೊಡ್ಡ ಬಸವರಾಜ. ಅವರು ಮತಗಟ್ಟೆ ಕೇಂದ್ರಕ್ಕೆ ಭೇಟಿ ನೀಡಿ ಮತದಾನದ ಪ್ರಕ್ರಿಯೆ ಪರಿಶೀಲನೆ ನಡೆಸಿ ಮತದಾನದ ಮಾಹಿತಿ ಪಡೆದುಕೊಂಡರು. ಸಂಜೆ 4 ಗಂಟೆಗೆ ಮತದಾನದ ಪ್ರಕರಿಯ ಮುಕ್ತಾಯಗೊಂಡಿತು. ಸಹಾಯಕ ಚುನಾವಣಾ ಅಧಿಕಾರಿ. ತಹಸಿಲ್ದಾರ್ ಅರುಣ್ ಹೆಚ್. ದೇಸಾಯಿ. ಹಾಗೂ 10 ಜನ ಸಿಬ್ಬಂದಿ ಮತಗಟ್ಟೆಯಲ್ಲಿ ಮತದಾನ ಪ್ರಕ್ರಿಯೆ ಕರ್ತವ್ಯ ನಿರ್ವಹಿಸಿದರು. ಸಿಂಧನೂರು ತಾಲೂಕಿನ ಒಟ್ಟು 924 ಮತದಾರರಲ್ಲಿ 215 ಮಹಿಳೆ ಯರು. ಹಾಗೂ 551 ಪುರುಷರು ಸೇರಿ ಒಟ್ಟು 766 ಮತದಾರರು ಮತ ಚಲಾಯಿಸಿದ್ದಾರೆ. ಶಾಂತಿ ಮತ್ತು ಸುವ್ಯವಸ್ಥಿತವಾಗಿ. ಮತದಾನದ ಪ್ರಕ್ರಿಯೆ ನಡೆಯಿತು ಎಂದು ತಹಸಿಲ್ದಾರ್ ಅರುಣ್ ಹೆಚ್ ದೇಸಾಯಿ ತಿಳಿಸಿದರು. ಮತದಾನ ಪ್ರಾರಂಭವಾದ ಬೆಳಗ್ಗೆ 8:00ಯಿಂದ ಮತದಾನದ ಪ್ರಕ್ರಿಯೆ ಮುಗಿಯುವವರೆಗೂ ಸಿಂಧನೂರಿನ ಮಿನಿ ವಿಧಾನಸೌಧದ ಕಚೇರಿಯ ಮತಗಟ್ಟೆ ಕೇಂದ್ರದ ಮುಂದೆ ಪೊಲೀಸ್ ಅಧಿಕಾರಿಗಳು. ಹಾಗೂ ಸಿಬ್ಬಂದಿ ಸೂಕ್ತ ಬಂದೋಬಸ್ತ್ ವ್ಯವಸ್ಥೆ ಕಲ್ಪಿಸಿದ್ದರು.



ಎಸ್‌ಐಆರ್ ರದ್ದತಿಗೆ ಆಗ್ರಹಿಸಿ ಬೀದರ್‌ನಲ್ಲಿ ತಿರಂಗಾ ಪಥಸಂಚಲನ

ಬೀದರ್,

ಎಸ್‌ಐಆರ್ ಪ್ರಕ್ರಿಯೆ ವಿರೋಧಿಸಿ ಪೀಪಲ್ ಅಗೇನ್ಸ್ಟ ಎಸ್‌ಐಆರ್ ಎಸ್‌ಐಆರ್ ವಿರೋಧಿ ಒಕ್ಕೂಟ ಹಾಗೂ ಸಂಯುಕ್ತ ಕಿಸಾನ್ ಮೋರ್ಚಾ ಸೇರಿದಂತೆ ವಿವಿಧ ಸಂಘಟನೆಗಳ ಒಕ್ಕೂಟದ ವತಿಯಿಂದ ಶುಕ್ರವಾರ ಸಂಜೆ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಅಂಬೇಡ್ಕರ್ ವೃತ್ತದಿಂದ ಆರಂಭವಾದ ತಿರಂಗಾ ಪಥಸಂಚಲನವು ಭಗತ್‌ಸಿಂಗ್ ವೃತ್ತದಲ್ಲಿ ಮುಕ್ತಾಯ ಗೊಂಡಿತು.

ಈ ಸಂದರ್ಭದಲ್ಲಿ ಮಾತನಾಡಿದ ಬಾಬುರಾವ್ ಹೊನ್ನಾ, ಬಿಜೆಪಿ ಮತ್ತು ಆರ್‌ಎಸ್‌ಎಸ್‌ಗೆ ಅಂಬಾನಿ ಹಾಗೂ ಅದಾನಿ ಹಣ ನೀಡುತ್ತಿದ್ದಾರೆ. ಅವರು ಅಮೆರಿಕದ ಅಧೀನದಲ್ಲಿದ್ದಾರೆ. ದೇಶದಲ್ಲಿ ಸರ್ವಾಧಿಕಾರವನ್ನು ತರಲು ಪ್ರಯತ್ನಿಸಲಾಗುತ್ತಿದೆ. ಆದರೆ, ಸರ್ವಾಧಿಕಾರಿಗಳನ್ನು ದಮನ ಮಾಡುವ ಕೆಲಸ ನಮಗೆ ಗೊತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಕಗ್ಗೊಲೆ ಮಾಡಲು ಪ್ರಯತ್ನಿಸಲಾಗುತ್ತಿದೆ. ನಾವು ಎರಡನೇ ಸ್ವಾತಂತ್ರ್ಯ ಹೋರಾಟಕ್ಕೆ ಸಿದ್ಧರಾಗಬೇಕಿದೆ. 2014ರಿಂದ ಯುವಜನರ ಮೆದುಳಿನಲ್ಲಿ ಗೋ ರಕ್ಷಣೆ, ಧರ್ಮ ರಕ್ಷಣೆಯಂತಹ ವಿಷಯಗಳನ್ನು ಬಿತ್ತಲಾಗಿದೆ. ಆದರೆ, ಇಂದು ಯುವಜನರು ಎಚ್ಚೆತ್ತುಕೊಂಡಿದ್ದಾರೆ. ಮುಂದಿನ ದಿನಗಳಲ್ಲಿ ಕೇಂದ್ರದ ಇಬ್ಬರನ್ನು ಜೈಲಿಗಟ್ಟುವ ಕೆಲಸವನ್ನು ಸಾರ್ವಜನಿಕರು ಮಾಡಲಿದ್ದಾರೆ ಎಂದು ಹೇಳಿದರು.



ವಿಠಲದಾಸ್ ಪ್ಯಾಗೆ ಮಾತನಾಡಿ, ಎಸ್‌ಐಆರ್ ಮೂಲಕ ಪ್ರಜಾಪ್ರಭುತ್ವದ ಕತ್ತು ಹಿಸುಕುವ ಕೆಲಸ ನಡೆಯುತ್ತಿದೆ. ಮೂಲನಿವಾಸಿಗಳ ಮತದಾನದ ಹಕ್ಕನ್ನು ಕಸಿದುಕೊಳ್ಳಲಾಗುತ್ತಿದೆ. ಅಚ್ಛೇ ದಿನ್ ಎಂದು ಜನರನ್ನು ನಂಬಿಸಿ ಮೋಸ ಮಾಡಲಾಗುತ್ತಿದೆ. ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ಮತ್ತು ರಾಷ್ಟ್ರೀಯ ನಾಗರಿಕರ ನೋಂದಣಿ (ಎನ್‌ಆರ್‌ಸಿ) ಜಾರಿಗೊಳಿಸಲು ಸಾಧ್ಯವಾಗದ ಕಾರಣ, ಇದೀಗ ಎಸ್‌ಐಆರ್ ಮೂಲಕ ಅವುಗಳನ್ನು ಜಾರಿಗೊಳಿಸಲು ಪ್ರಯತ್ನಿಸಲಾಗುತ್ತಿದೆ ಎಂದು ಆರೋಪಿಸಿದರು.

ಮತದಾರರ ಪಟ್ಟಿಯಿಂದ ಹೆಸರುಗಳನ್ನು ಕೈಬಿಡುವ ಮೂಲಕ ಜನರನ್ನು ಎರಡನೇ ದರ್ಜೆಯ ಮತದಾರರನ್ನಾಗಿ ಮಾಡಲಾಗುತ್ತಿದೆ. ಬಿಜೆಪಿ ಮತ್ತು ಆರ್‌ಎಸ್‌ಎಸ್‌ನ ಈ ಕುತಂತ್ರ ಯುವಜನರಿಗೆ ಅರ್ಥವಾಗಿದ್ದು, ದೇಶಾದ್ಯಂತ ಜಂತರ್ ಮಂತರ್ ಮಾದರಿಯ ಪ್ರತಿಭಟನೆಗಳು ನಡೆಯುತ್ತಿವೆ ಎಂದರು.

ಪ್ರಜಾಪ್ರಭುತ್ವವನ್ನು ಉಳಿಸಬೇಕು ಹಾಗೂ ಮತದಾನದ ಹಕ್ಕನ್ನು ರಕ್ಷಿಸಿಕೊಳ್ಳಬೇಕು. ಬಿಜೆಪಿ ಮತ್ತು ಆರ್‌ಎಸ್‌ಎಸ್‌ನಿಂದ ಅನ್ಯಾಯವಾಗುವುದಿಲ್ಲ ಎಂಬ ಖಾತರಿ ದೊರೆಯುವವರೆಗೆ ಹೋರಾಟ ಮುಂದುವರಿಯಲಿದೆ ಎಂದು ಎಚ್ಚರಿಸಿದರು.

ಮತ್ತೊಮ್ಮೆ ಮನುವಾದವನ್ನು ಆಡಳಿತದಲ್ಲಿ ಸ್ಥಾಪಿಸಲು ಎಸ್‌ಐಆರ್ ಮೂಲಕ ಪ್ರಯತ್ನಿಸಲಾಗುತ್ತಿದೆ. ಪ್ರಜಾಪ್ರಭುತ್ವವನ್ನು ಹತ್ತಿಕ್ಕುವ ಕೆಲಸ ನಡೆಯುತ್ತಿದೆ. ಪ್ರಜಾಪ್ರಭುತ್ವ ಉಳಿಯಬೇಕಾದರೆ ಎಸ್‌ಐಆರ್ ರದ್ದುಗೊಳಿಸಬೇಕು. ಕೇಂದ್ರದ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ಹುದ್ದೆಯಿಂದ ವಜಾಗೊಳಿಸಿ, ಅವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಎಸ್‌ಐಆರ್ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ರದ್ದುಗೊಳಿಸಿ, ಮತದಾರರ ಪಟ್ಟಿಯಿಂದ ಅಳಿಸಲಾಗಿರುವ ಅರ್ಹ ಮತದಾರರ ಹೆಸರುಗಳನ್ನು ಮರುಸ್ಥಾಪಿಸಬೇಕು. ಚುನಾವಣಾ ಆಯುಕ್ತರ ನೇಮಕಾತಿ ಕಾಯ್ದೆ-2023ಕ್ಕೆ ಮಾಡಲಾದ ತಿದ್ದುಪಡಿಗಳನ್ನು ರದ್ದುಗೊಳಿಸಬೇಕು. ಪಕ್ಷಪಾತರಹಿತ ಪ್ರಕ್ರಿಯೆಯ ಮೂಲಕ ಹೊಸ ಚುನಾವಣಾ ಆಯೋಗವನ್ನು ನೇಮಿಸಿ, ಮತದಾರರ ಪಟ್ಟಿಯನ್ನು ನ್ಯಾಯಸಮ್ಮತವಾಗಿ ಪರಿಷ್ಕರಿಸಬೇಕು ಎಂದು ಒತ್ತಾಯಿಸಿದರು.

ಇವಿಎಂ ಬದಲಿಗೆ ಬ್ಯಾಲೆಟ್ ಪೇಪರ್ ಮೂಲಕ ಚುನಾವಣೆ ನಡೆಸುವ ವ್ಯವಸ್ಥೆಯನ್ನು ಜಾರಿಗೊಳಿಸಬೇಕು. ದೇಶದಲ್ಲಿ ಸಂವಿಧಾನ ಉಳಿದರೆ ಮಾತ್ರ ಪ್ರಜಾಪ್ರಭುತ್ವ ಉಳಿಯಲು ಸಾಧ್ಯ. ಮುಖ್ಯ ಚುನಾವಣಾ ಆಯುಕ್ತರ ರಾಜೀನಾಮೆ ಹಾಗೂ ಬೇಡಿಕೆಗಳ ಈಡೇರಿಕೆಗಾಗಿ ಹೋರಾಟ ಮುಂದುವರಿಸಲಾಗುವುದು ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಮುಹಮ್ಮದ್ ನಿಜಾಮುದ್ದೀನ್, ಮಾರುತಿ ಬೌದ್ಧೆ, ಓಂಪ್ರಕಾಶ್ ರೊಟ್ಟೆ, ಡಾ. ಮಕ್ಸೂದ್ ಚಂದಾ, ಡಾ. ದೇವಿದಾಸ್ ತುಮಕುಂಟೆ, ರೇಷ್ಮಾ ಹಂಸರಾಜ್, ಮುಹಮ್ಮದ್ ಆಷಿಫುದ್ದೀನ್, ಎಂ.ಡಿ. ಶಫಾಯತ್ ಅಲಿ, ಗುರುನಾಥ ಗಡ್ಡೆ, ನಜೀರ್ ಸಾಬ್, ಡಾ. ಜಿಯಾವುಲ್ ಇಸ್ಲಾಂ, ಮುಹಮ್ಮದ್ ಇಸೂಫ್, ಮುಬಾಸೀರ್ ಸಿಂಧೆ, ಅರುಣ್ ಪಟೇಲ್, ಸೈಯದ್ ಮನ್ಸೂರ್ ಖಾದ್ರಿ, ಸಾವಿತ್ರಿ ಹಾಗೂ ಸಂತೋಷಕುಮಾರ್ ಜೋಳದಾಬಕೆ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.



ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆ: ಕಲಬುರಗಿ ಜಿಲ್ಲೆಯಲ್ಲಿ ಶೇ.84.38ರಷ್ಟು ಮತದಾನ


ಕಲಬುರಗಿ:

ಕರ್ನಾಟಕ ವಿಧಾನ ಪರಿಷತ್ತಿನ ಈಶಾನ್ಯ ಶಿಕ್ಷಕರ ಕ್ಷೇತ್ರದ ಒಂದು ಸ್ಥಾನಕ್ಕೆ ಶುಕ್ರವಾರ ಕಲಬುರಗಿ ಜಿಲ್ಲೆಯಲ್ಲಿ ಶಾಂತಿಯುತವಾಗಿ ಮತದಾನ ನಡೆದಿದ್ದು, ಜಿಲ್ಲೆಯ ಒಟ್ಟು 40 ಮತಗಟ್ಟೆಗಳಲ್ಲಿ ಶೇ.84.38ರಷ್ಟು ಮತದಾನವಾಗಿದೆ ಎಂದು ಕ್ಷೇತ್ರದ ಸಹಾಯಕ ಚುನಾವಣಾಧಿಕಾರಿಯಾಗಿರುವ ಜಿಲ್ಲಾಧಿಕಾರಿ ಇಕ್ರಮ್ ಶರೀಫ್ ತಿಳಿಸಿದ್ದಾರೆ. ಕಲಬುರಗಿ ನಗರದಲ್ಲಿ 10 ಮತಗಟ್ಟೆಗಳು ಸೇರಿದಂತೆ ಜಿಲ್ಲೆಯಾದ್ಯಂತ ಒಟ್ಟು 40 ಮತಗಟ್ಟೆಗಳಲ್ಲಿ ಮತದಾನ ಶಾಂತಿಯುತವಾಗಿ ನಡೆದಿದೆ.

ಜಿಲ್ಲೆಯಲ್ಲಿ ಒಟ್ಟು 10,652 ಮತದಾರರಿದ್ದು, ಅವರಲ್ಲಿ 5,672 ಪುರುಷರು ಹಾಗೂ 4,980 ಮಹಿಳೆಯರಿದ್ದಾರೆ. ಈ ಪೈಕಿ 5,002 ಪುರುಷರು ಮತ್ತು 3,986 ಮಹಿಳೆಯರು ಸೇರಿ ಒಟ್ಟು 8,988 ಮಂದಿ ತಮ್ಮ ಮತದಾನದ ಹಕ್ಕು ಚಲಾಯಿಸಿದ್ದಾರೆ. ಈ ಮೂಲಕ ಜಿಲ್ಲೆಯಲ್ಲಿ ಶೇ.84.38ರಷ್ಟು ಮತದಾನ ದಾಖಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಸೇಡಂ ತಾಲೂಕಿನ ಅಡಕಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮತಗಟ್ಟೆ ಸಂಖ್ಯೆ 91ರಲ್ಲಿ 15 ಪುರುಷರು ಹಾಗೂ 9 ಮಹಿಳೆಯರು ಸೇರಿದಂತೆ ಒಟ್ಟು 24 ಮತದಾರರಿದ್ದರು. ಎಲ್ಲ ಮತದಾರರು ಮತ ಚಲಾಯಿಸುವ ಮೂಲಕ ಈ ಮತಗಟ್ಟೆಯಲ್ಲಿ ಶೇ.100ರಷ್ಟು ಮತದಾನವಾಗಿದೆ.

ಇನ್ನು ಕಲಬುರಗಿ ತಾಲೂಕಿನ ಪಟ್ಟಣ ನಾಡ ಕಚೇರಿಯ ಮತಗಟ್ಟೆ ಸಂಖ್ಯೆ 69ರಲ್ಲಿ 42 ಪುರುಷರು ಹಾಗೂ 25 ಮಹಿಳೆಯರು ಸೇರಿದಂತೆ ಒಟ್ಟು 67 ಮತದಾರರಿದ್ದರು. ಈ ಪೈಕಿ 35 ಪುರುಷರು ಹಾಗೂ 16 ಮಹಿಳೆಯರು ಸೇರಿ ಒಟ್ಟು 51 ಮಂದಿ ಮತ ಚಲಾಯಿಸಿದ್ದು, ಶೇ.76.12ರಷ್ಟು ಮತದಾನವಾಗಿದೆ. ಇದು ಜಿಲ್ಲೆಯಲ್ಲಿ ಅತ್ಯಂತ ಕಡಿಮೆ ಮತದಾನ ದಾಖಲಾದ ಮತಗಟ್ಟೆಯಾಗಿದೆ.



ಈಶಾನ್ಯ ಕರ್ನಾಟಕ ಶಿಕ್ಷಕರ ಮತಕ್ಷೇತ್ರದ ಚುನಾವಣೆ: ಚಿಂಚೋಳಿಯಲ್ಲಿ ಶೇ.90.44ರಷ್ಟು ಮತದಾನ

ಚಿಂಚೋಳಿ :

ಈಶಾನ್ಯ ಕರ್ನಾಟಕ ಶಿಕ್ಷಕರ ಮತಕ್ಷೇತ್ರದ ಚುನಾವಣೆಯು ಮಂಗಳವಾರ ಚಿಂಚೋಳಿ ತಾಲೂಕಿನಲ್ಲಿ ಶಾಂತಿಯುತವಾಗಿ ನಡೆಯಿತು. ತಾಲೂಕಿನಲ್ಲಿ ಒಟ್ಟಾರೆ ಶೇ. 90.44ರಷ್ಟು ಮತದಾನವಾಗಿದ್ದು, ಶಿಕ್ಷಕ ಮತದಾರರು ಉತ್ಸಾಹದಿಂದ ತಮ್ಮ ಹಕ್ಕು ಚಲಾಯಿಸಿದರು ಎಂದು ತಾಲೂಕು ತಹಸೀಲ್ದಾರ್ ಸುಬ್ಬಣ್ಣ ಜಮಖಂಡಿ ತಿಳಿಸಿದ್ದಾರೆ.

ಶಿಕ್ಷಕ ಮತದಾರರು ಬೆಳಗ್ಗೆಯಿಂದಲೇ ಮತಗಟ್ಟೆಗಳಿಗೆ ಆಗಮಿಸಿ, ಸರತಿ ಸಾಲಿನಲ್ಲಿ ನಿಂತು ಮತದಾನ ಮಾಡಿದರು. ಚುನಾವಣಾ ಪ್ರಕ್ರಿಯೆಯನ್ನು ಸುಗಮವಾಗಿ ನಡೆಸಲು ತಾಲೂಕಿನಲ್ಲಿ ಒಟ್ಟು ಮೂರು ಮತಗಟ್ಟೆಗಳನ್ನು ಸ್ಥಾಪಿಸಲಾಗಿತ್ತು. ಯಾವುದೇ ಅಹಿತಕರ ಘಟನೆಗಳಿಗೆ ಆಸ್ಪದ ನೀಡದಂತೆ ಸೂಕ್ತ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು. ಇಡೀ ಚುನಾವಣಾ ಪ್ರಕ್ರಿಯೆ ಶಾಂತಿಯುತವಾಗಿ ಮುಕ್ತಾಯಗೊಂಡಿತು.

ಚಿಂಚೋಳಿ ತಾಲೂಕಿನಲ್ಲಿ ಒಟ್ಟು 450 ನೋಂದಾಯಿತ ಶಿಕ್ಷಕ ಮತದಾರರಿದ್ದು, ಈ ಪೈಕಿ 407 ಮಂದಿ ಮತ ಚಲಾಯಿಸಿದ್ದಾರೆ. ಮತದಾನ ಮಾಡಿದವರಲ್ಲಿ 281 ಪುರುಷರು ಹಾಗೂ 126 ಮಹಿಳೆಯರು ಸೇರಿದ್ದಾರೆ.

ಚಿಂಚೋಳಿ ಮತಗಟ್ಟೆ (ಸಂಖ್ಯೆ 96): ಇಲ್ಲಿ ಒಟ್ಟು 205 ಶಿಕ್ಷಕರು ಮತ ಚಲಾಯಿಸಿದ್ದು, ಅವರಲ್ಲಿ 131 ಪುರುಷರು ಹಾಗೂ 74 ಮಹಿಳೆಯರು ಇದ್ದರು.

ಐನಾಪುರ ಮತಗಟ್ಟೆ (ಸಂಖ್ಯೆ 97): ಇಲ್ಲಿ ಒಟ್ಟು 96 ಶಿಕ್ಷಕರು ಮತದಾನ ಮಾಡಿದ್ದಾರೆ. ಇವರಲ್ಲಿ 73 ಪುರುಷರು ಹಾಗೂ 23 ಮಹಿಳೆಯರು ಸೇರಿದ್ದಾರೆ.

ಸುಲೇಪೇಟ ಮತಗಟ್ಟೆ (ಸಂಖ್ಯೆ 98): ಇಲ್ಲಿ ಒಟ್ಟು 106 ಶಿಕ್ಷಕರು ಮತ ಚಲಾಯಿಸಿದ್ದು, ಅವರಲ್ಲಿ 77 ಪುರುಷರು ಹಾಗೂ 29 ಮಹಿಳೆಯರು ಇದ್ದರು.

ಸೂಕ್ತ ಭದ್ರತಾ ವ್ಯವಸ್ಥೆಯೊಂದಿಗೆ ಚುನಾವಣೆಯನ್ನು ಶಾಂತಿಯುತವಾಗಿ ನಡೆಸಿ ಮುಕ್ತಾಯಗೊಳಿಸಲಾಯಿತು ಎಂದು ತಹಶೀಲ್ದಾರ್ ತಿಳಿಸಿದ್ದಾರೆ.

ಎಸ್‌ಐಆರ್ ರದ್ದತಿ, ಮುಖ್ಯ ಚುನಾವಣಾ ಆಯುಕ್ತರ ವಜಾಕ್ಕೆ ಆಗ್ರಹಿಸಿ ಪ್ರತಿಭಟನೆ

ಕಲಬುರಗಿ:

ವಿಶೇಷ ತೀವ್ರ ಮತದಾರರ ಪಟ್ಟಿ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯನ್ನು ರದ್ದುಗೊಳಿಸಬೇಕು, ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ಹುದ್ದೆಯಿಂದ ವಜಾಗೊಳಿಸಿ ಕಾನೂನು ಕ್ರಮ ಕೈಗೊಳ್ಳಬೇಕು ಹಾಗೂ ಮತದಾರರ ಹಕ್ಕುಗಳನ್ನು ರಕ್ಷಿಸಬೇಕು ಎಂದು ಆಗ್ರಹಿಸಿ ಸಂಯುಕ್ತ ಹೋರಾಟ ಸಮಿತಿಯ ಜಿಲ್ಲಾ ಘಟಕದ ನೇತೃತ್ವದಲ್ಲಿ ಶುಕ್ರವಾರ ನಗರದ ಜಗತ್ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆಯ ಬಳಿಕ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಮನವಿ ಸಲ್ಲಿಸಿದ ಪ್ರತಿಭಟನಾಕಾರರು, ಪಾರದರ್ಶಕ ಪ್ರಕ್ರಿಯೆ ಅನುಸರಿಸದೆ ಮತದಾರರ ಪಟ್ಟಿಯಿಂದ ತೆಗೆದುಹಾಕಲಾಗಿದೆ ಎಂದು ಆರೋಪಿಸಲಾದ 13.41 ಕೋಟಿ ನಾಗರಿಕರ ಮತದಾನದ ಹಕ್ಕುಗಳನ್ನು ಮರುಸ್ಥಾಪಿಸಬೇಕು ಎಂದು ಒತ್ತಾಯಿಸಿದರು.

ಮುಖ್ಯ ಚುನಾವಣಾ ಆಯುಕ್ತರು ತಮ್ಮ ಸಾಂವಿಧಾನಿಕ ಜವಾಬ್ದಾರಿಗಳನ್ನು ಉಲ್ಲಂಘಿಸಿದ್ದಾರೆ ಎಂದು ಆರೋಪಿಸಿದ ಪ್ರತಿಭಟನಾಕಾರರು, ಚುನಾವಣಾ ಆಯುಕ್ತರ ನೇಮಕಾತಿ ಆಯ್ಕೆ ಸಮಿತಿಯಲ್ಲಿ ಪ್ರಧಾನಮಂತ್ರಿಯವರು ನಾಮನಿರ್ದೇಶನ ಮಾಡುವ ಸಚಿವರ ಬದಲಿಗೆ ಭಾರತದ ಮುಖ್ಯ ನ್ಯಾಯಮೂರ್ತಿಗಳನ್ನು ಸೇರಿಸುವಂತೆ 2023ರ ಕಾಯ್ದೆಗೆ ತಿದ್ದುಪಡಿ ತರಬೇಕು ಎಂದು ಆಗ್ರಹಿಸಿದರು.

ಚುನಾವಣೆಯಲ್ಲಿ ಹಣಬಲ ಮತ್ತು ತೋಳ್ಬಲದ ಪ್ರಭಾವವನ್ನು ತಡೆಗಟ್ಟಲು, ಪ್ರಮಾಣಾನುಗುಣ ಪ್ರಾತಿನಿಧ್ಯ ಪದ್ಧತಿಯನ್ನು ಜಾರಿಗೆ ತರಲು ಹಾಗೂ ಚುನಾವಣೆಗಳಿಗೆ ಸರ್ಕಾರಿ ಧನಸಹಾಯ ಒದಗಿಸಲು ಸಮಗ್ರ ಚುನಾವಣಾ ಸುಧಾರಣೆಗಳನ್ನು ಕೈಗೊಳ್ಳಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಯಿತು.

ಎಸ್?ಐಆರ್ ವಿರುದ್ಧ ದೆಹಲಿಯಲ್ಲಿ ಪ್ರತಿಭಟನೆ ನಡೆಸುತ್ತಿರುವ ವಿದ್ಯಾರ್ಥಿಗಳು ಮತ್ತು ಯುವಜನರಿಗೆ ಬೆಂಬಲ ವ್ಯಕ್ತಪಡಿಸಿದ ಮುಖಂಡರು, ಪ್ರತಿಭಟನಾಕಾರರ ಮೇಲೆ



ದೆಹಲಿ ಪೊಲೀಸರು ದೌರ್ಜನ್ಯ ಹಾಗೂ ಕಿರುಕುಳ ನಡೆಸಿದ್ದಾರೆ ಎಂಬ ಆರೋಪಗಳನ್ನು ಖಂಡಿಸಿದರು. ವಿದ್ಯಾರ್ಥಿನಿಯರು ಮತ್ತು ಪತ್ರಕರ್ತೆಯರ ಮೇಲೆ ಲೈಂಗಿಕ ಕಿರುಕುಳ ನಡೆದಿದೆ ಎಂಬ ಆರೋಪಗಳ ಕುರಿತು ನಿಷ್ಪಕ್ಷಪಾತ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಶಾಂತಿಯುತ ಪ್ರತಿಭಟನೆ ಸಂವಿಧಾನಬದ್ಧ ಹಕ್ಕಾಗಿದ್ದು, ಪ್ರತಿಭಟನಾಕಾರರ ವಿರುದ್ಧ ಬಲಪ್ರಯೋಗ ಮಾಡುವುದು ಪ್ರಜಾಪ್ರಭುತ್ವದ ಆಶಯಗಳಿಗೆ ವಿರುದ್ಧವಾಗಿದೆ ಎಂದು ಮುಖಂಡರು ಅಭಿಪ್ರಾಯಪಟ್ಟರು. ದೆಹಲಿಯ ಜಂತರ್ ಮಂತರ್?ನಲ್ಲಿ ಪ್ರತಿಭಟನೆ ನಡೆಸಲು ನೀಡಲಾಗಿದ್ದ ಅನುಮತಿಯನ್ನು ರದ್ದುಗೊಳಿಸಿದ ಆದೇಶವನ್ನು ಹಿಂಪಡೆಯಬೇಕು. ಪ್ರತಿಭಟನಾಕಾರರನ್ನು ಕಾನೂನುಬಾಹಿರವಾಗಿ ಗೃಹಬಂಧನದಲ್ಲಿಡುವ ಕ್ರಮಗಳನ್ನು ನಿಲ್ಲಿಸಬೇಕು ಎಂದು ಒತ್ತಾಯಿಸಿದರು.

ಕಲಬುರಗಿ ಜಿಲ್ಲೆಯಲ್ಲಿ ಬರದಿಂದ ಸಂಕಷ್ಟಕ್ಕೆ ಸಿಲುಕಿರುವ ರೈತರ ಸಮಸ್ಯೆಗಳನ್ನೂ ಪ್ರಸ್ತಾಪಿಸಿದ ಪ್ರತಿಭಟನಾಕಾರರು, ಕೂಡಲೇ ಸಮರ್ಪಕ ಬರ ಪರಿಹಾರ ಬಿಡುಗಡೆ ಮಾಡಬೇಕು. ಗ್ರಾಮೀಣ ಜನರಿಗೆ ವರ್ಷವಿಡೀ ಉದ್ಯೋಗ ಒದಗಿಸಬೇಕು ಹಾಗೂ ಪ್ರತಿ ಎಕರೆಗೆ ಕನಿಷ್ಠ 50 ಸಾವಿರ ರೂ. ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು. ಕಬ್ಬು ಬೆಳೆಗಾರರ ನ್ಯಾಯಯುತ ಬೇಡಿಕೆಗಳನ್ನು ಕೂಡಲೇ ಈಡೇರಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ಮಹೇಶ್ ಎಸ್.ಬಿ., ಭೀಮಾಶಂಕರ ಮಾಡಿಯಾಳ, ಮೌಲಾ ಮುಲ್ಲಾ, ಅರ್ಜುನ್ ಭದ್ರೆ, ಉಮಾಪತಿ ಮಾಲಿಪಾಟೀಲ, ನಾಗೇಂದ್ರಪ್ಪ ಥಂಬೆ, ಶಾಂತಾ ಘಂಟಿ, ಪ್ರಭುದೇವ ಯಳಸಂಗಿ, ಭೀಮಶೆಟ್ಟಿ ಯೆಂಪಳ್ಳಿ, ಸಾಜೀದ್ ಅಹ್ಮದ್ ಡಿಗ್ಗಾವ್?ಕರ್, ಮರೆಪ್ಪ ಹಳ್ಳಿ, ಎಸ್.ಆರ್. ಕೊಲ್ಲೂರು, ಅರ್ಜುನ್ ಗೊಬ್ಬೂರು, ಪಾಂಡುರಂಗ ಮಾವಿನಕರ್, ಸುಧಾಮ ಧನ್ನಿ, ಪದ್ಮಿಣಿ ಕಿರಣಗಿ, ಇಮಾಮ್?ಸಾಬ್ ಹಾಗೂ ಪ್ರಮೋದ ಪಂಚಾಳ್ ಸೇರಿದಂತೆ ವಿವಿಧ ಸಂಘಟನೆಗಳ ಹಲವು ಮುಖಂಡರು ಪಾಲ್ಗೊಂಡಿದ್ದರು.

ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆ : ಶೇ.86.97 ರಷ್ಟು ದಾಖಲೆ ಮಟ್ಟದ ಮತದಾನ

ಕಲಬುರಗಿ:

ಕರ್ನಾಟಕ ವಿಧಾನ ಪರಿಷತ್ತಿನ ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆ ಶುಕ್ರವಾರ ಶಾಂತಿಯುತವಾಗಿ ಮುಕ್ತಾಯಗೊಂಡಿದ್ದು, ಶೇ. 86.97ರಷ್ಟು ಮತದಾನ ದಾಖಲಾಗಿದೆ ಎಂದು ಚುನಾವಣಾಧಿಕಾರಿ ಹಾಗೂ ಪ್ರಾದೇಶಿಕ ಆಯುಕ್ತೆ ಝುಹೀರಾ ನಸೀಮ್ ತಿಳಿಸಿದ್ದಾರೆ.

ಶಿಕ್ಷಕ ಮತದಾರರು ಅತ್ಯಂತ ಉತ್ಸಾಹದಿಂದ ಚುನಾವಣೆಯಲ್ಲಿ ಭಾಗವಹಿಸುವ ಮೂಲಕ ತಮ್ಮ ಮತದಾನದ ಹಕ್ಕನ್ನು ಚಲಾಯಿಸಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಅಂತಿಮ ಚುನಾವಣಾ ಅಂಕಿಅಂಶಗಳ ಪ್ರಕಾರ, ಕ್ಷೇತ್ರದಲ್ಲಿ ಒಟ್ಟು 34,784 ನೋಂದಾಯಿತ ಮತದಾರರಿದ್ದು, ಅವರಲ್ಲಿ 30,250 ಮಂದಿ ಮತ ಚಲಾಯಿಸಿದ್ದಾರೆ. ಈ ಮೂಲಕ ಶೇ. 86.97ರಷ್ಟು ಮತದಾನವಾಗಿದೆ. ಪುರುಷ ಮತದಾ ರರ ಪೈಕಿ 18,008 ಮಂದಿ ಮತ ಚಲಾಯಿಸಿದ್ದು, ಶೇ. 89.86 ರಷ್ಟು ಮತದಾನ ದಾಖಲಾಗಿದೆ. ಮಹಿಳಾ ಮತದಾರರ ಪೈಕಿ 12,242 ಮಂದಿ ಮತ ಚಲಾಯಿಸಿದ್ದು, ಶೇ. 83.03ರಷ್ಟು ಮತದಾನವಾಗಿದೆ.



ಜಿಲ್ಲಾವಾರು ಮತದಾನದ ವಿವರ : ಕಲಬುರಗಿ ಜಿಲ್ಲೆಯಲ್ಲಿ ಒಟ್ಟು 10,652 ಮತದಾರರ ಪೈಕಿ 8,988 ಮಂದಿ ಮತ ಚಲಾಯಿಸಿದ್ದಾರೆ. ಇವರಲ್ಲಿ 5,002 ಪುರುಷರು ಹಾಗೂ 3,986 ಮಹಿಳೆಯರು ಇದ್ದಾರೆ. ಬೀದರ್ ಜಿಲ್ಲೆಯಲ್ಲಿ ಒಟ್ಟು 7,038 ಮತದಾರರ ಪೈಕಿ 6,086 ಮಂದಿ ಮತ ಚಲಾಯಿಸಿದ್ದಾರೆ. ಇವರಲ್ಲಿ 3,408 ಪುರುಷರು ಹಾಗೂ 2,678 ಮಹಿಳೆಯರು ಇದ್ದಾರೆ.

ರಾಯಚೂರು ಜಿಲ್ಲೆಯಲ್ಲಿ ಒಟ್ಟು 5,402 ಮತದಾರರ ಪೈಕಿ 4,648 ಮಂದಿ ಮತದಾನ ಮಾಡಿದ್ದಾರೆ. ಇವರಲ್ಲಿ 2,787 ಪುರುಷರು ಹಾಗೂ 1,861 ಮಹಿಳೆಯರು ಇದ್ದಾರೆ.

ಬಳ್ಳಾರಿ ಜಿಲ್ಲೆಯಲ್ಲಿ ಒಟ್ಟು 3,393 ಮತದಾರರ ಪೈಕಿ 2,935 ಮಂದಿ ಮತ ಚಲಾಯಿಸಿದ್ದಾರೆ. ಇವರಲ್ಲಿ 1,615 ಪುರುಷರು ಹಾಗೂ 1,320 ಮಹಿಳೆಯರು ಇದ್ದಾರೆ.

ವಿಜಯನಗರ ಜಿಲ್ಲೆಯಲ್ಲಿ ಒಟ್ಟು 3,326 ಮತದಾರರ ಪೈಕಿ 3,029 ಮಂದಿ ಮತದಾನ ಮಾಡಿದ್ದಾರೆ. ಇವರಲ್ಲಿ 2,030 ಪುರುಷರು ಹಾಗೂ 999 ಮಹಿಳೆಯರು ಇದ್ದಾರೆ. ಕೊಪ್ಪಳ ಜಿಲ್ಲೆಯಲ್ಲಿ ಒಟ್ಟು 2,714 ಮತದಾರರ ಪೈಕಿ 2,513 ಮಂದಿ ಮತ ಚಲಾಯಿಸಿದ್ದಾರೆ. ಇವರಲ್ಲಿ 1,732 ಪುರುಷರು ಹಾಗೂ 781 ಮಹಿಳೆಯರು ಇದ್ದಾರೆ.

ಯಾದಗಿರಿ ಜಿಲ್ಲೆಯಲ್ಲಿ ಒಟ್ಟು 2,259 ಮತದಾರರ ಪೈಕಿ 2,051 ಮಂದಿ ಮತ ಚಲಾಯಿಸಿದ್ದಾರೆ. ಇವರಲ್ಲಿ 1,434 ಪುರುಷರು ಹಾಗೂ 617 ಮಹಿಳೆಯರು ಇದ್ದಾರೆ.

ಚುನಾವಣಾ ಪ್ರಕ್ರಿಯೆಯನ್ನು ಶಾಂತಿಯುತವಾಗಿ ಹಾಗೂ ಸುಸೂತ್ರವಾಗಿ ನಡೆಸಲು ಸಹಕರಿಸಿದ ಎಲ್ಲ ಶಿಕ್ಷಕ ಮತದಾರರು, ಸಿಬ್ಬಂದಿ ವರ್ಗ ಹಾಗೂ ಅಧಿಕಾರಿಗಳಿಗೆ ಪ್ರಾದೇಶಿಕ ಆಯುಕ್ತೆ ಝುಹೀರಾ ನಸೀಮ್ ಧನ್ಯವಾದ ತಿಳಿಸಿದ್ದಾರೆ.

ಎಸ್‌ಐಆರ್ ವಿರೋಧಿಸಿ ಬಸವಕಲ್ಯಾಣದಲ್ಲಿ ಪ್ರತಿಭಟನೆ

ಬಸವಕಲ್ಯಾಣ:

ಎಸ್‌ಐಆರ್ ಪ್ರಕ್ರಿಯೆಯನ್ನು ವಿರೋಧಿಸಿ ಜನತೆ ಹಾಗೂ ಎಸ್‌ಐಆರ್ ವಿರೋಧಿ ಒಕ್ಕೂಟದ ವತಿಯಿಂದ ನಗರದ ಅಂಬೇಡ್ಕರ್ ವೃತ್ತದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಈ ವೇಳೆ ಎದ್ದೇಳು ಕರ್ನಾಟಕದ ಜಿಲ್ಲಾ ಸಂಚಾಲಕ ಸಂದೀಪ್ ಮುಕಿಂದೆ ಮಾತನಾಡಿ, ಕಳೆದ 10ರಂದು ವಿವಿಧ ಯುವ ಸಂಘಟನೆಗಳು ದೇಶದ ರಾಜಧಾನಿ ದೆಹಲಿಯಲ್ಲಿ ಎಸ್‌ಐಆರ್ ವಿರುದ್ಧ ಪ್ರತಿಭಟನೆಗೆ ಕರೆ ನೀಡಿದ್ದವು. ಆದರೆ, ಅಂದು ಸರ್ಕಾರ ದೆಹಲಿಯಲ್ಲಿ ಸಾವಿರಾರು ಪೊಲೀಸರು ಹಾಗೂ ಅರೆಸೈನಿಕ ಪಡೆಗಳನ್ನು ನಿಯೋಜಿಸಿ ಪ್ರತಿಭಟನೆ ತಡೆಯಲು ಪ್ರಯತ್ನಿಸಿತು. ದೆಹಲಿ ಮೆಟ್ರೋ ರೈಲು ಸೇವೆಯನ್ನು ಸ್ಥಗಿತಗೊಳಿಸಲಾಗಿತ್ತು. ದೆಹಲಿಗೆ ಬರಬೇಕಿದ್ದ ನೂರಾರು ರೈಲುಗಳನ್ನು ವ`ಾಗ`ರ್ವ`ಂಧ್ಯೆಯೇ ತಡೆಯಲಾಗಿತ್ತು. ಜಂತರ್ ಮಂತರ್‌ನಲ್ಲಿನ ಪ್ರತಿಭಟನಾ ಸ್ಥಳಕ್ಕೂ ನಿಷೇಧ ಹೇರಿ ದರ್ಪ ಮೆರೆಯಲಾಯಿತು ಎಂದು ಆರೋಪಿಸಿದರು.

ಇದಕ್ಕೆ ಪ್ರತಿಯಾಗಿ ನಾಗರಿಕ ಸಮಾಜದ ಸಂಘಟನೆಗಳು ಇಂದು ದೇಶಾದ್ಯಂತ ಪ್ರತಿಭಟನೆಗೆ ಕರೆ ನೀಡಿವೆ. ಈ ಕರೆಗೆ ಸ್ಪಂದಿಸಿ ಬಸವಕಲ್ಯಾಣದಲ್ಲಿಯೂ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.



ಜಗದೀಶ್ವರ್ ಬಿರಾದಾರ್ ಮಾತನಾಡಿ, ಎಸ್‌ಐಆರ್ ಹೆಸರಿನಲ್ಲಿ ವಯಸ್ಕರಿಗೆ ಮತದಾನದ ಹಕ್ಕು ನೀಡಿರುವ ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ಜನರನ್ನು ಮತದಾನದ ಹಕ್ಕಿನಿಂದ ವಂಚಿಸುವ ಹುನ್ನಾರ ನಡೆಯುತ್ತಿದೆ ಎಂದು ಆರೋಪಿಸಿದರು. ಇದು ಯಾವುದೋ ಒಂದು ಸಮುದಾಯಕ್ಕೆ ಮಾತ್ರ ಸಂಬಂಧಿಸಿದ ಸಮಸ್ಯೆ ಎಂದು ಭಾವಿಸಿ ಸಮಾಜ ನಿರಾಳವಾಗಿದೆ. ಆದರೆ, ಮತದಾರರ ಪಟ್ಟಿಯಿಂದ ಹೆಸರು ಕೈಬಿಟ್ಟ ಬಳಿಕ ಉಂಟಾಗುವ ದುಷ್ಪರಿಣಾಮಗಳ ಕುರಿತು ಜನರಲ್ಲಿ ಜಾಗೃತಿ ಇಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಾಮಾಜಿಕ ಹೋರಾಟಗಾರ ಇಕ್ರಮೊದ್ದಿನ್ ಖಾದಿವಾಲೆ ಮಾತನಾಡಿ, ಮತದಾನದ ಹಕ್ಕಿನಿಂದ ವಂಚಿಸುವುದು ಅಸಂವಿಧಾನಿಕ ಕ್ರಮವಾಗಿದೆ. ಇದರ ವಿರುದ್ಧದ ಇಂದಿನ ಹೋರಾಟವು ಕ್ರಾಂತಿಯ ಕಿಡಿಯಾಗಿದೆ ಎಂದು ಅಭಿಪ್ರಾಯಪಟ್ಟರು.

ವಿದ್ಯಾರ್ಥಿ ಸಂಘಟನೆಯ ಮುಖಂಡ ರಿಯಾಜ್ ಪಟೇಲ್ ಮಾತನಾಡಿ, ಎಸ್‌ಐಆರ್ ಪ್ರಕ್ರಿಯೆಯ ಮೂಲಕ ದೇಶದ ಪ್ರಜೆಗಳೊಂದಿಗೆ ಮೋಸದ ಆಟ ಆಡಲಾಗುತ್ತಿದೆ. ಈ ಮೂಲಕ ದೇಶದ ಜನರಿಗೆ ದ್ರೋಹ ಎಸಗಲಾಗುತ್ತಿದೆ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ಸುರೇಶ್ ಮೋರೆ, ರೈತ ಮುಖಂಡ ಖಾನಸಾಬ್, ಕನ್ನಡ ಹೋರಾಟಗಾರ ಮಹಾಂತೇಶ್ ಗೋರಕರ್ ದಲಿತ ಮುಖಂಡ ಯುವರಾಜ್ ಬೇಂಡೆ, ಆಕಾಶ್ ಕಿನ್ನೆರ್ಕರ್ ಯೂತ್ ಕಾಂಗ್ರೆಸ್‌ನ ಮನೋಜ್ ಖೆಲೆ, ಅಜಾರ್ ಹಾಗೂ ಸಯ್ಯದ್ ಪಾಶಾ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಒಂದನೇಯ ಪುಟದಿಂದ

ಕೆಪಿಎಸ್‌ಸಿ ಅಕ್ರಮ ಪ್ರಕರಣ : ಐಎಎಸ್ ಅಧಿಕಾರಿ ಜ್ಞಾನೇಂದ್ರ ಕುಮಾರ್ ವಿರುದ್ಧ ಕಾನೂನು ಕ್ರಮಕ್ಕೆ ಸಿಎಂ ಅನುಮತಿ

ಕಾರ್ಯನಿರ್ವಹಿಸಿದ್ದರು.

2016ರ ಬ್ಯಾಚ್‌ನ ಐಎಎಸ್ ಅಧಿಕಾರಿಯಾಗಿರುವ ಗಂಗ್ವಾರ್ ಬಂಧನದ ಸಂದರ್ಭದಲ್ಲಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದರು.ಪರೀಕ್ಷೆಯ ದಾಖಲೆಗಳು ಹಾಗೂ ಒಎಂಆರ್ ಶೀಟ್‌ಗಳ ನಿರ್ವಹಣೆ ಸೇರಿದಂತೆ ಹಲವು ಅಂಶಗಳಲ್ಲಿ ಅಕ್ರಮ ನಡೆದಿರುವ ಆರೋಪಗಳ ಬಗ್ಗೆ ಸಿಐಡಿ ತನಿಖೆ ನಡೆಸುತ್ತಿದೆ. ಈ ಪ್ರಕರಣದಲ್ಲಿ ಅಧಿಕಾರಿಗಳು ಮತ್ತು ಇತರ ವ್ಯಕ್ತಿಗಳ ಪಾತ್ರದ ಬಗ್ಗೆಯೂ ತನಿಖೆ ನಡೆಯುತ್ತಿದೆ.

ಸಿಎಂ ಡಿಕೆಶಿ ಸಭೆಯಲ್ಲಿ ಸ್ಪಂದನೆ ಸಿಗದಿದ್ದರೆ ಅ.27ಕ್ಕೆ ಕರ್ನಾಟಕ ಬಂದ್‌ಗೆ ಕರೆ: ಚೂನಪ್ಪ ಪೂಜಾರಿ ಎಚ್ಚರಿಕೆ!

ಆದರೆ, ನಮ್ಮ ಹೋರಾಟದ ಮೂಲಕ ಎಂಎಸ್ಪಿ ಹೆಚ್ಚಿಸುವಂತೆ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಮತ್ತು ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಲಾಗಿದೆ. ಈಗಾಗಲೇ ಸಕ್ಕರೆ ಕಾರ್ಖಾನೆಗಳು ಆರಂಭವಾಗಬೇಕಿತ್ತು. ಭೀಕರ ಬರದಿಂದ ರೈತರು ಸಂಕಷ್ಟದಲ್ಲಿದ್ದಾರೆ. ಹಾಗಾಗಿ, ಮಾಲೀಕರು ರೈತರು ಒಳ್ಳೆಯ ಸುದ್ದಿ ಕೊಟ್ಟರೆ, 27ರಂದು ಕಾರ್ಖಾನೆಗಳನ್ನು ಆರಂಭಿಸಲಿ ಎಂದು ಚೂನಪ್ಪ ಪೂಜಾರಿ ಹೇಳಿದರು.

ಡಿ-82 ಉಪಕಾಲುವೆಯ ನೀರಿಗಾಗಿ ರೈತರ ಧರಣಿ ಸತ್ಯಾಗ್ರಹ!

ಕಾಲುವೆಯಲ್ಲಿ ಅಕ್ರಮವಾಗಿ ನೀರು ಪಡೆಯುವುದು, ದೊಡ್ಡ ಗಾತ್ರದ ಪೈಪುಗಳ ಬಳಕೆ ಹಾಗೂ ನೀರು ಸೋರಿಕೆಯಾಗುತ್ತಿರುವ ಸಮಸ್ಯೆಗಳನ್ನು ತಕ್ಷಣ ಪರಿಶೀಲಿಸಿ ಕ್ರಮ ಕೈಗೊಳ್ಳಬೇಕು. ಕೆಳಭಾಗದ ರೈತರ ಜಮೀನುಗಳಿಗೆ ನೀರು ತಲುಪುವವರೆಗೆ ಮೇಲ್ಭಾಗದ ನೀರು ಬಳಕೆಯನ್ನು ನಿಯಂತ್ರಿಸಬೇಕು ಎಂದು ರೈತರು ಒತ್ತಾಯಿಸಿದರು.

ಜಿಲ್ಲಾಧಿಕಾರಿಗಳಿಗೆ ಮನವಿ

ರೈತರ ಸಮಸ್ಯೆಗಳನ್ನು ಪರಿಹರಿ ಸುವಂತೆ ರಾಯಚೂರು ಜಿಲ್ಲಾಧಿಕಾ ರಿಗಳಿಗೆ ಸಿರವಾರ ತಹಶೀಲ್ದಾರರ ಮೂಲಕ ಮನವಿ ಸಲ್ಲಿಸಲಾಗಿದೆ. ಸಂಬಂಧಪಟ್ಟ ನೀರಾವರಿ ಅಧಿಕಾ ರಿಗಳು ಸ್ಥಳ ಪರಿಶೀಲನೆ ನಡೆಸಿ, ಕೆಳಭಾಗದ ರೈತರ ಬೆಳೆಗಳನ್ನು ಉಳಿ ಸಲು ತುರ್ತು ಕ್ರಮ ಕೈಗೊಳ್ಳಬೇಕು. ಸಮಸ್ಯೆ ಬಗೆಹರಿಯದಿದ್ದರೆ ಹೋರಾ ಟ ತೀವ್ರಗೊಳಿಸುವುದಾಗಿ ರೈತ ಸಂಘ ಎಚ್ಚರಿಸಿದೆ.

ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಪ್ರಭಾಕರ ಪಾಟೀಲ್ ಇಂಗಳದಾಳ, ರಾಜ್ಯ ಕಾರ್ಯದರ್ಶಿ ಸೂರುರಯ್ಯ ಆರ್ ಎಸ್ ಮಠ, ಯಂಕಪ್ಪ ಕಾರಬಾರಿ,ದೊಡ್ಡಬಸನಗೌಡ,ಪ್ರಭಾಕರ ಪಾಟೀಲ್, ಜಿಲ್ಲಾ ಕಾರ್ಯಾಧ್ಯಕ್ಷ ಬಸವರಾಜ ಮಾ.ಪಾ., ಲಿಂಗರೆಡ್ಡಿ ಪಾಟೀಲ್, ಬೂದಯ್ಯಸ್ವಾಮಿ,ಎ.ಗೋವಿಂದಪ್ಪ ನಾಯಕ, ಜಿಲ್ಲಾ ಉಪಾಧ್ಯಕ್ಷ ಹನುಮನಗೌಡ ಜಾಲಹಳ್ಳಿ, ವಿರೇಶ ಗವಿಗಟ್ಟು, ಸಿದ್ದಯ್ಯಸ್ವಾಮಿ ಗೊರ್ಕಲ್, ದೇವೆಂದ್ರಪ್ಪ ನಾಯಕ,ಶಂಕ್ರಪ್ಪ ದೇವತಗಲ್, ಹಾಜಿಮಸ್ತಾನ್,ದೇವರಾಜ ನಾಯಕ, ಸಿರವಾರ ತಾಲೂಕು ಅಧ್ಯಕ್ಷ ಶಂಕ್ರಪ್ಪ ದೇವತಗಲ್,ತಾ.ಪ ಕಾ. ಬಸವರಾಜ ನವಲಕಲ್ ಜಿಲ್ಲಾ ಮುಖಂಡ ದೊ. ದೇವೇಂದ್ರಪ್ಪ ನಾಯಕ, ಲಿಂಗಸಗೂರು ತಾಲೂಕು ಅಧ್ಯಕ್ಷ ಮಲ್ಲನಗೌಡ ಸೇರಿದಂತೆ ಹಲವು ರೈತರು ಭಾಗವಹಿಸಿದ್ದರು.

ನವೀನ ಆಲೋಚನೆಗಳನ್ನು ಆವಿಷ್ಕಾರಗಳಾಗಿ ರೂಪಿಸಿ ಪೇಟೆಂಟ್ ಪಡೆಯಿರಿ: ಪ್ರೊ.ಬಟ್ಟು ಸತ್ಯನಾರಾಯಣ



ಕಲಬುರಗಿ:

ವಿದ್ಯಾರ್ಥಿಗಳು ತಮ್ಮ ನವೀನ ಆಲೋಚನೆಗಳನ್ನು ಆವಿಷ್ಕಾರಗಳಾಗಿ ರೂಪಿಸಿ, ಅವುಗಳಿಗೆ ಪೇಟೆಂಟ್‌ಗಳನ್ನು ಪಡೆಯುವ ಮೂಲಕ ಸ್ಟಾರ್ಟಪ್‌ಗಳನ್ನು ಸ್ಥಾಪಿಸಬೇಕು ಎಂದು ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣ ಕರೆ ನೀಡಿದರು.

ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ (ಸಿಯುಕೆ) ಕಾನೂನು ಅಧ್ಯಯನ ವಿಭಾಗವು ಆಂತರಿಕ ಗುಣಮಟ್ಟ ಭರವಸೆ ಕೋಶದ (ಐಕ್ಯೂಎಸಿ) ಸಹಯೋಗದಲ್ಲಿ ಶುಕ್ರವಾರ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಆಯೋಜಿಸಿದ್ದ ಬೌದ್ಧಿಕ ಆಸ್ತಿ ಮತ್ತು ನೈತಿಕತೆ ಕುರಿತ ರಾಷ್ಟ್ರೀಯ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಬೌದ್ಧಿಕ ಆಸ್ತಿ ಹಕ್ಕುಗಳು ಮೂಲ ಆಲೋಚನೆಗಳು ಮತ್ತು ಆವಿಷ್ಕಾರಗಳಿಗೆ ಕಾನೂನು ರಕ್ಷಣೆ ಒದಗಿಸುವುದರ ಜೊತೆಗೆ ನಾವೀನ್ಯತೆಗೆ ಉತ್ತೇಜನ ನೀಡುತ್ತವೆ. ವಿದ್ಯಾರ್ಥಿಗಳು ಹಾಗೂ ಸಂಶೋಧಕರು ಸಂಶೋಧನೆ, ತಂತ್ರಜ್ಞಾನ ಅಭಿವೃದ್ಧಿ ಮತ್ತು ನೈತಿಕ ಸಂಶೋಧನಾ ಪದ್ಧತಿಗಳಿಗೆ ಆದ್ಯತೆ ನೀಡಬೇಕು. ತಮ್ಮ ಸಂಶೋಧನಾ ಫಲಿತಾಂಶಗಳನ್ನು ಸಮಾಜಕ್ಕೆ ಉಪಯುಕ್ತವಾದ ಉತ್ಪನ್ನಗಳು ಹಾಗೂ ಪರಿಹಾರಗಳಾಗಿ ಪರಿವರ್ತಿಸುವ ಮೂಲಕ ರಾಷ್ಟ್ರೀಯ ಅಭಿವೃದ್ಧಿ ಮತ್ತು ಆತ್ಮನಿರ್ಭರ ಭಾರತ ನಿರ್ಮಾಣದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಾಗಾರದ ಮುಖ್ಯ ಭಾಷಣ ಮಾಡಿದ ನವದೆಹಲಿಯ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿಯ (ಸಿಎಸ್‌ಐಆರ್) ಹಿರಿಯ ಪ್ರಧಾನ ವಿಜ್ಞಾನಿ ಡಾ. ಕನಿಕಾ ಮಲಿಕ್ ಅವರು, ತಾಂತ್ರಿಕ ಪ್ರಗತಿ, ಆವಿಷ್ಕಾರಗಳಿಗೆ ಕಾನೂನು ರಕ್ಷಣೆ ಒದಗಿಸುವುದು ಹಾಗೂ ಅವುಗಳ ವಾಣಿಜ್ಯೀಕರಣದಲ್ಲಿ ಪೇಟೆಂಟ್‌ಗಳ ಮಹತ್ವವನ್ನು ವಿವರಿಸಿದರು.

ಐಕ್ಯೂಎಸಿ ನಿರ್ದೇಶಕರು ಹಾಗೂ ಎಂಜಿನಿಯರಿಂಗ್ ನಿಕಾಯದ ಡೀನ್ ಪ್ರೊ. ಎಂ. ಅಮರೇಂದ್ರ ಮತ್ಸ ಮಾತನಾಡಿ, ವಿಕಸಿತ ಭಾರತ ನಿರ್ಮಾಣದಲ್ಲಿ ತಾಂತ್ರಿಕ ನಾವೀನ್ಯತೆ ಮತ್ತು ಪೇಟೆಂಟ್‌ಗಳ ಕುರಿತ ಅರಿವು ಪ್ರಮುಖ ಪಾತ್ರ ವಹಿಸುತ್ತವೆ. ಸಂಶೋಧನೆ ಹಾಗೂ ತಂತ್ರಜ್ಞಾನ ಅಭಿವೃದ್ಧಿಯಲ್ಲಿ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆ ಹೆಚ್ಚಾಗಬೇಕು ಎಂದು ಅಭಿಪ್ರಾಯಪಟ್ಟರು.

ಕಾನೂನು ಅಧ್ಯಯನ ನಿಕಾಯದ ಡೀನ್ ಪ್ರೊ. ಬಸವರಾಜ ಎಂ. ಕುಬಕಡ್ಡಿ ಅವರು ಕಾರ್ಯಾಗಾರದ ಉದ್ದೇಶ ವಿವರಿಸಿದರು.

ಕಾರ್ಯಾಗಾರದಲ್ಲಿ ಎರಡು ತಾಂತ್ರಿಕ ಗೋಷ್ಠಿಗಳನ್ನು ಆಯೋಜಿಸಲಾಗಿತ್ತು. ಮೊದಲ ಗೋಷ್ಠಿಯಲ್ಲಿ ಡಾ. ಕನಿಕಾ ಮಲಿಕ್ ಅವರು ಪೇಟೆಂಟ್ ನೀತಿಶಾಸ್ತ್ರ: ಪೇಟೆಂಟ್ ಕರಡು ರಚನೆ ಮತ್ತು ಸಲ್ಲಿಕೆಯಲ್ಲಿನ ನೈತಿಕ ಪದ್ಧತಿಗಳು ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು. ಗೋಷ್ಠಿಯ ಅಧ್ಯಕ್ಷತೆಯನ್ನು ಪ್ರೊ. ಎಂ. ಅಮರೇಂದ್ರ ಮತ್ಸ ವಹಿಸಿದ್ದರು. ಭೌತ ವಿಜ್ಞಾನಗಳ ನಿಕಾಯದ ಡೀನ್ ಪ್ರೊ. ರಾಜೀವ್ ಜೋಶಿ ಸಹ-ಅಧ್ಯಕ್ಷರಾಗಿದ್ದರು.

ಎರಡನೇ ಗೋಷ್ಠಿಯಲ್ಲಿ ಮಹಾರಾಷ್ಟ್ರ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯದ ಸಹ ಪ್ರಾಧ್ಯಾಪಕ ಡಾ. ಅಶೋಕ್ ಪಿ. ವಾಡ್ಜೆ ಅವರು ಬೌದ್ಧಿಕ ಆಸ್ತಿ ಹಕ್ಕುಗಳು ಮತ್ತು ನೀತಿಶಾಸ್ತ್ರ: ಭಾರತದ ಕಾನೂನು ಚೌಕಟ್ಟು, ಸವಾಲುಗಳು ಮತ್ತು ಉತ್ತಮ ಪದ್ಧತಿಗಳು ಎಂಬ ವಿಷಯದ ಕುರಿತು ಮಾತನಾಡಿದರು. ಗಣಕ ವಿಜ್ಞಾನ ನಿಕಾಯದ ಡೀನ್ ಪ್ರೊ. ಆರ್. ಎಸ್. ಹೆಗಡೆ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು. ರಾಸಾಯನಿಕ ವಿಜ್ಞಾನಗಳ ನಿಕಾಯದ ಡೀನ್ ಪ್ರೊ. ಪಲ್ಲೆಪೋಗು ರಾಘವಯ್ಯ ಸಹ-ಅಧ್ಯಕ್ಷರಾಗಿದ್ದರು.

ಕಾರ್ಯಕ್ರಮದಲ್ಲಿ ಸಹ-ಸಂಯೋಜಕಿ ಜುನು ದಾಸ್, ಪ್ರೊ. ಪ್ರಮೋದ್ ಕುಮಾರ್, ಡಾ. ರೇಣುಕಾ ಗುಬ್ಬೇವಾಡ, ಡಾ. ಜಗದೀಶ್ ಚಂದ್ರ, ಡಾ. ವೈಷ್ಣವಿ ನಾರಾಯಣಿ, ಡಾ. ಕೃಷ್ಣ ಕುಮಾರ್ ಶರ್ಮಾ, ಡಾ. ತಿಲಕಾ, ಡಾ. ಗುರುರಾಜ ಮುಕರಂಬಿ, ಡಾ. ಮಯೂರ್ ಪೂಜಾರ್, ಡಾ. ಜಗದೀಶ್ ಬಿರಾದಾರ ಹಾಗೂ ಡಾ. ಮಲ್ಲಿಕಾರ್ಜುನ ಆನಂದ ಹಳ್ಳಿ ಸೇರಿದಂತೆ ವಿವಿಧ ವಿಭಾಗಗಳ ಪ್ರಾಧ್ಯಾಪಕರು, ಸಂಶೋಧನಾ ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕಾರ್ಯಕ್ರಮದ ಸಂಯೋಜಕಿ ಡಾ. ಶಶಿರೇಖಾ ಮಾಳಗಿ ಸ್ವಾಗತಿಸಿದರು. ಕಾನೂನು ಅಧ್ಯಯನ ವಿಭಾಗದ ಮುಖ್ಯಸ್ಥ ಡಾ. ಅನಂತ ಚಿಂಚುರೆ ವಂದಿಸಿದರು.

ಕಲಬುರಗಿ ಅ.28, 29ರಂದು ಜಿಲ್ಲಾ ಸಾಹಿತ್ಯ ಸಮ್ಮೇಳನಕ್ಕೆ ಸಿದ್ಧತೆ



ಕಲಬುರಗಿ:

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಅ.28 ಮತ್ತು 29ರಂದು ನಗರದ ವಿಶ್ವೇಶ್ವರಯ್ಯ ಭವನದಲ್ಲಿ ಆಯೋಜಿಸಿರುವ ಎರಡು ದಿನಗಳ ಕಲಬುರಗಿ ಜಿಲ್ಲಾ 23ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸಿದ್ಧತೆಗಳು ಭರದಿಂದ ಸಾಗಿವೆ.

ಸಮ್ಮೇಳನದ ಯಶಸ್ಸಿಗಾಗಿ ರಚಿಸಲಾಗಿರುವ ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ನೇಮಕಗೊಂಡ ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಬಸವರಾಜ ಬಳೂಂಡಗಿ ಹಾಗೂ ಗೌರವಾಧ್ಯಕ್ಷರಾದ ಮಾಜಿ ಉಪಮಹಾಪೌರ ನಾಗವೇಣಿ ತಿಪ್ಪಣ್ಣಪ್ಪ ಕಮಕನೂರ ಅವರನ್ನು ಸತ್ಕರಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ನಾಗವೇಣಿ ತಿಪ್ಪಣ್ಣಪ್ಪ ಕಮಕನೂರ, ಕನ್ನಡ ಸಾಹಿತ್ಯ ಪರಿಷತ್ತು ಈ ಹಿಂದೆ ಪಂಡಿತರಿಗೆ ಮಾತ್ರ ಸೀಮಿತವಾಗಿತ್ತು. ಆದರೆ, ಈಗ ಜಿಲ್ಲೆಯಲ್ಲಿ ನಮ್ಮಂಥ ಸಾಮಾನ್ಯ ಜನರ ಸಂಸ್ಥೆಯಾಗಿ ಅದನ್ನು ಬೆಳೆಸಿದ ಕೀರ್ತಿ ಕಸಾಪ ಜಿಲ್ಲಾಧ್ಯಕ್ಷ ವಿಜಯಕುಮಾರ ಪಾಟೀಲ ತೇಗಲತಿಪ್ಪಿ ಅವರಿಗೆ ಸಲ್ಲುತ್ತದೆ. ಇದು ನಿಜಕ್ಕೂ ಹೆಮ್ಮೆಯ ವಿಷಯವಾಗಿದ್ದು, ಸಮ್ಮೇಳನದ ಯಶಸ್ಸಿಗೆ ಸಹಕರಿಸುವುದಾಗಿ ತಿಳಿಸಿದರು.

ಸ್ವಾಗತ ಸಮಿತಿ ಅಧ್ಯಕ್ಷರೂ ಆಗಿರುವ ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಬಸವರಾಜ ಬಳೂಂಡಗಿ ಮಾತನಾಡಿ, ಸಮಾಜಕ್ಕೆ ಕೊಡುಗೆ ನೀಡಿದ ವ್ಯಕ್ತಿಗಳನ್ನು ಗುರುತಿಸಿ ಗೌರವಿಸುವ ಉತ್ತಮ ಕಾರ್ಯವನ್ನು ಕನ್ನಡ ಸಾಹಿತ್ಯ ಪರಿಷತ್ತು ಮಾಡುತ್ತಿದೆ. ಕನ್ನಡಾಭಿಮಾನ ಬೆಳೆಸಿಕೊಂಡು ಕನ್ನಡ ಭಾಷೆಯನ್ನು ಉಳಿಸುವ ಕಾರ್ಯವನ್ನು ಪರಿಷತ್ತು ಕೈಗೊಳ್ಳುತ್ತಿದೆ ಎಂದು ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ವಿಜಯಕುಮಾರ ಪಾಟೀಲ ತೇಗಲತಿಪ್ಪಿ ಮಾತನಾಡಿ, ಕನ್ನಡ ಭಾಷೆಯ ಅಭಿವೃದ್ಧಿ ಹಾಗೂ ಸಂಸ್ಕೃತಿ ಮತ್ತು ಸಾಹಿತ್ಯದ ರಕ್ಷಣೆಗಾಗಿ ಕನ್ನಡ ಸಾಹಿತ್ಯ ಪರಿಷತ್ತು ಶ್ರಮಿಸುತ್ತಿದೆ. ತಮ್ಮ ಐದು ವರ್ಷಗಳ ಅವಧಿಯಲ್ಲಿ ಆರು ಜಿಲ್ಲಾ ಸಾಹಿತ್ಯ ಸಮ್ಮೇಳನಗಳನ್ನು ಆಯೋಜಿಸುವ ಮೂಲಕ ದಾಖಲೆ ನಿರ್ಮಿಸಲಾಗಿದೆ ಎಂದರು.

ಸಮ್ಮೇಳನದ ಗೌರವಾಧ್ಯಕ್ಷರಾಗಿ ಲೋಕೋಪಯೋಗಿ ಇಲಾಖೆಯ ನಿವೃತ್ತ ಮುಖ್ಯ ಇಂಜಿನಿಯರ್ ಡಾ. ಸುರೇಶ ಶರ್ಮಾ ಹಾಗೂ ಕಾರ್ಯಾಧ್ಯಕ್ಷರಾಗಿ ವಾಣಿಜ್ಯ ತೆರಿಗೆ ಇಲಾಖೆಯ ಕಾಶಿನಾಥ ಪಲ್ಲೇರಿ ಅವರನ್ನು ಆಯ್ಕೆ ಮಾಡಲಾಗಿದೆ.

ಕಾರ್ಯಕ್ರಮದಲ್ಲಿ ಜಿಲ್ಲಾ ಕಸಾಪ ಕಾರ್ಯದರ್ಶಿ ಶಿವರಾಜ ಅಂಡಗಿ, ಕೋಶಾಧ್ಯಕ್ಷ ಶರಣರಾಜ ಛಪ್ಪರಬಂದಿ, ಸೈಯ್ಯದ್ ನಜಿರುದ್ದಿನ್ ಮುತ್ತವಲ್ಲಿ, ರವೀಂದ್ರ ಕುಮಾರ ಭಂಟನಳ್ಳಿ, ಧರ್ಮರಾಜ ಜವಳಿ, ಹಣಮಂತರಾವ ಪೆಂಚನಪಳ್ಳಿ, ನಾಗರಾಜ ಪಾಟೀಲ, ಅನೀಲಕುಮಾರ ಪಾಟೀಲ ತೇಗಲತಿಪ್ಪಿ, ರವಿಕುಮಾರ ಶಹಾಪೂರಕರ್ ರಾಜು ಕೋಷ್ಟಿ, ಪ್ರೊ. ಬಿ.ಎ. ಪಾಟೀಲ ಮಹಾಗಾಂವ, ಸಂಗಣ್ಣ ಚೋರಗಸ್ತಿ, ಮಲ್ಲಿನಾಥ ಸಂಗಶೆಟ್ಟಿ, ಜಯಶ್ರೀ ಜಮಾದಾರ, ಪ್ರಭುಶೆಟ್ಟಿ ಮುದ್ದಾ, ನಾಗರಾಜ ಪೂಜಾರಿ, ಮಲ್ಲಿಕಾರ್ಜುನ ಯಂಕಂಚಿ, ಚಂದ್ರಕಾಂತ ಸೂರನ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆ : ಬೀದರ್ ಜಿಲ್ಲೆಯಲ್ಲಿ ಶೇ.86.47ರಷ್ಟು ಮತದಾನ

ಬೀದರ್,

ಕರ್ನಾಟಕ ವಿಧಾನ ಪರಿಷತ್ತಿನ ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆ-2026ರ ಅಂಗವಾಗಿ ಶುಕ್ರವಾರ ಜಿಲ್ಲಾದ್ಯಂತ ಮತದಾನ ಪ್ರಕ್ರಿಯೆ ಅತ್ಯಂತ ಶಾಂತಿಯುತವಾಗಿ ನಡೆಯಿತು. ಬೆಳಗ್ಗೆ 8 ಗಂಟೆಯಿಂದ ಆರಂಭವಾದ ಮತದಾನದಲ್ಲಿ ಜಿಲ್ಲೆಯಲ್ಲಿ ಒಟ್ಟಾರೆ ಶೇ. 86.47ರಷ್ಟು ಮತದಾನ ದಾಖಲಾಗಿದೆ.

ಜಿಲ್ಲೆಯಲ್ಲಿ ಒಟ್ಟು 7,038 ನೋಂದಾಯಿತ ಶಿಕ್ಷಕ ಮತದಾರರಿದ್ದು, ಇವರಲ್ಲಿ 3,794 ಪುರುಷರು ಹಾಗೂ 3,244 ಮಹಿಳೆಯರಿದ್ದಾರೆ. ಈ ಪೈಕಿ 3,414 ಪುರುಷರು ಮತ್ತು 2,672 ಮಹಿಳೆಯರು ಸೇರಿದಂತೆ ಒಟ್ಟು 6,086 ಮತದಾರರು ತಮ್ಮ ಹಕ್ಕು ಚಲಾಯಿಸಿದ್ದಾರೆ. ಪುರುಷರ ಮತದಾನದ ಪ್ರಮಾಣ ಶೇ. 89.98ರಷ್ಟಿದ್ದರೆ, ಮಹಿಳೆಯರ ಮತದಾನದ ಪ್ರಮಾಣ ಶೇ. 82.37ರಷ್ಟಿದೆ. ಈ ಮೂಲಕ ಜಿಲ್ಲೆಯಲ್ಲಿ ಒಟ್ಟಾರೆ ಶೇ. 86.47ರಷ್ಟು ಮತದಾನವಾಗಿದೆ.

ಬೆಳಗ್ಗೆಯಿಂದಲೇ ಮತದಾರರು ಉತ್ಸಾಹದಿಂದ ಮತಗಟ್ಟೆಗಳಿಗೆ ಆಗಮಿಸಿ ಮತ ಚಲಾಯಿಸಿದರು. ಜಿಲ್ಲೆಯ ವಿವಿಧ ಮತಗಟ್ಟೆಗಳಿಗೆ ವಿವಿಧ ಪಕ್ಷಗಳ ರಾಜಕೀಯ ನಾಯಕರು ಭೇಟಿ ನೀಡುತ್ತಿರುವುದು ಕಂಡುಬಂದಿತು. ಬಿಜೆಪಿ ಅಭ್ಯರ್ಥಿ ಶಶೀಲ್ ನಮೋಶಿ ಹಾಗೂ ಕಾಂಗ್ರೆಸ್ ಅಭ್ಯರ್ಥಿ ಶರಣಪ್ಪ ಮಟ್ಟೂರು ನಡುವೆ ನೇರ ಹಣಾಹಣಿ ಏರ್ಪಟ್ಟಿದೆ. ಅಕ್ಟೋಬರ್ 27ರಂದು ಗುಲ್ಬರ್ಗಾ ವಿಶ್ವವಿದ್ಯಾಲಯದ ಗಣಿತ ವಿಭಾಗದಲ್ಲಿ ಮತ ಎಣಿಕೆ ನಡೆದು, ಫಲಿತಾಂಶ ಪ್ರಕಟವಾಗಲಿದೆ.

ಜಿಲ್ಲೆಯ ಎಲ್ಲ ಮತಗಟ್ಟೆಗಳಲ್ಲೂ ಬಿಗಿ ಪೊಲೀಸ್ ಭದ್ರತೆ ಕಲ್ಪಿಸಲಾಗಿದ್ದು, ಮತದಾನ ಪ್ರಕ್ರಿಯೆ ಸುಗಮವಾಗಿ ನಡೆಯಿತು. ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗಿತ್ತೆ ಮಾಧವ್ ವಿಠ್ಠಲರಾವ್ ಹಾಗೂ ಬೀದರ್ ಸಹಾಯಕ ಆಯುಕ್ತ ಅಭಿನವ್ ಜೈನ್ ಅವರು ಬೀದರ್ ನಗರ, ಹಳ್ಳಿಖೇಡ್, ಹುಮನಾಬಾದ್, ರಾಜೇಶ್ವರ್ ಹಾಗೂ ದುಬಲಗುಂಡಿ ಸೇರಿದಂತೆ ಜಿಲ್ಲೆಯ ವಿವಿಧ ಭಾಗಗಳ ಮತಗಟ್ಟೆಗಳಿಗೆ ಭೇಟಿ ನೀಡಿ ಪರಿಶೀಲಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ಅವರೂ ವಿವಿಧ ಮತದಾನ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಜಿಲ್ಲೆಯಲ್ಲಿ ಶಾಂತಿಯುತವಾಗಿ ಮತದಾನ ನಡೆಯುವಂತೆ ಅಗತ್ಯ ಭದ್ರತಾ ಕ್ರಮಗಳನ್ನು ಕೈಗೊಳ್ಳಲಾಗಿತ್ತು.

ಮೊಬೈಲ್ ಬಂದ ಮೇಲೆ ಮರೆಯಾಗುತ್ತಿವೆ ಮೌಲ್ಯಗಳು

''ಗುರು ಬ್ರಹ್ಮ ಗುರು ವಿಷ್ಣು ಗುರುದೇವೋ ಮಹೇಶ್ವರ, ಗುರು ಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀ ಗುರುವೇ ನಮಃ''

ಎಂದು ನಾವೆಲ್ಲಾ ಗುರು ಹಿರಿಯರಿಗೆ ಗೌರವಿಸುತ್ತಿದ್ದ ದಿನಗಳು, ಆದರೆ ಈಗಿನ ಮಕ್ಕಳಲ್ಲಿ ಗುರುಹಿರಿಯರಿಗೆ ಗೌರವಿಸುವ ಮೌಲ್ಯಗಳು ಕಾಣೆಯಾಗುತ್ತಿವೆ. ಅದಕ್ಕಾಗಿ ನನ್ನ ಚಿಕ್ಕ ಚಿಕ್ಕ ಅನಿಸಿಕೆಗಳು.

''ಬೆಳೆಯುವ ಸಿರಿ ಮೊಳಕೆಯಲ್ಲಿ''ಎನ್ನುವ ಗಾದೆ ಮಾತು ತುಂಬಾ ರ್ಥಪರ್ಣವಾದ್ದು ಏಕೆಂದರೆ ಇಂದಿನ ಮಕ್ಕಳು ನಾಳಿನ ಪ್ರಜೆಗಳು. ಮಕ್ಕಳೇ ದೇಶದ ಭವಿಷ್ಯ., ಆದರೆ ಇಂದಿನ ಆಧುನಿಕ ಯುಗದಲ್ಲಿ ಮಕ್ಕಳ ಕೈಯಲ್ಲಿ ಪುಸ್ತಕಗಳಿಗಿಂತ ಮೊಬೈಲ್ಗಳೇ ಹೆಚ್ಚಾಗಿ ಕಾಣಿಸುತ್ತಿವೆ. ಆಟವಾಡುವ ಮೈದಾನಗಳು ಖಾಲಿಯಾಗುತ್ತಿವೆ, ಮನೆಯ ಅಂಗಳದಲ್ಲಿ ಮಕ್ಕಳ ನಗು ಕಡಿಮೆಯಾಗುತ್ತಿದೆ. ಅಜ್ಜ-ಅಜ್ಜಿಯರ ಕಥೆಗಳು ಮರೆಯಾಗುತ್ತಿವೆ, ಹಿರಿಯರೊಂದಿಗೆ ಕುಳಿತು ಮಾತನಾಡುವ ಸಮಯ ಕಡಿಮೆಯಾಗುತ್ತಿದೆ ಮತ್ತು ಅವರ ಮಾತಿಗೂ ಕೂಡ ಬೆಲೆ ನೀಡುತ್ತಿಲ್ಲ.

ಮೊಬೈಲ್ ಕೈಗೆ ಬಂದಿದೆ, ಆದರೆ ಮಾನವೀಯ ಮೌಲ್ಯಗಳು ದೂರವಾಗುತ್ತಿವೆಯೇ? ಎಂಬ ಪ್ರಶ್ನೆ ಇಂದು ಪ್ರತಿಯೊಬ್ಬ ಪೋಷಕರನ್ನೂ ಕಾಡುತ್ತಿದೆ.

ಒಂದು ಕಾಲದಲ್ಲಿ ಮಕ್ಕಳು ಬೆಳಗ್ಗೆ ಎದ್ದ ತಕ್ಷಣ ತಂದೆ-ತಾಯಿಗೆ ನಮಸ್ಕರಿಸುತ್ತಿದ್ದರು. ಹಿರಿಯರನ್ನು ಗೌರವಿಸುತ್ತಿದ್ದರು. ಸ್ನೇಹಿತರೊಂದಿಗೆ ಆಟವಾಡುತ್ತಿದ್ದರು. ತಪ್ಪು ಮಾಡಿದಾಗ ಕ್ಷಮೆ ಕೇಳುತ್ತಿದ್ದರು. ಕಷ್ಟದಲ್ಲಿರುವವರಿಗೆ ಸಹಾಯ ಮಾಡುತ್ತಿದ್ದರು. ಆದರೆ ಇಂದು ಅನೇಕ ಮಕ್ಕಳು ಮೊಬೈಲ್ನಲ್ಲಿಯೇ ತಮ್ಮದೇ ಆದ ಪ್ರಪಂಚವನ್ನು ಸೃಷ್ಟಿಸಿಕೊಂಡಿದ್ದಾರೆ.

ಊಟ ಮಾಡುವಾಗ ಮೊಬೈಲ್, ಓದುವಾಗ ಮೊಬೈಲ್, ಮಲಗುವ ಮುನ್ನವೂ ಮೊಬೈಲ್! ಪಕ್ಕದಲ್ಲಿಯೇ ತಂದೆ-ತಾಯಿ ಇದ್ದರೂ ಅವರೊಂದಿಗೆ ಮಾತನಾಡಲು ಸಮಯವಿಲ್ಲ. ಸ್ನೇಹಿತರು ಎದುರಿಗಿದ್ದರೂ ಅವರೊಂದಿಗೆ ಬೆರೆಯುವುದಕ್ಕಿಂತ ಮೊಬೈಲ್ ನೋಡುವುದೇ ಹೆಚ್ಚು ಆಸಕ್ತಿಯಾಗಿದೆ.

ಮೊಬೈಲ್ ಜ್ಞಾನವನ್ನು ನೀಡಬಲ್ಲದು, ಹೊಸ ವಿಷಯಗಳನ್ನು ಕಲಿಸಬಲ್ಲದು, ಜಗತ್ತಿನ ಪರಿಚಯ ಮಾಡಿಸಬಲ್ಲದು. ಆದರೆ ಅದರ ಅತಿಯಾದ ಬಳಕೆ ಮಕ್ಕಳ ಓದು, ಆರೋಗ್ಯ, ಏಕಾಗ್ರತೆ,ತಕ್ಷಣವೇ ಕೋಪಮಾಡಿಕೊಳ್ಳುವ ಗುಣಗಳಲ್ಲಿ ಬದಲಾವಣೆ, ಏಕಾಂಗಿಯಾಗಿ ಇರುವುದು ಮತ್ತು ಸಾಮಾಜಿಕ ಸಂಬಂಧಗಳ ಮೇಲೆ ಪರಿಣಾಮ ಬೀರಬಹುದು. ಆದ್ದರಿಂದ ಮೊಬೈಲ್ ಕೆಟ್ಟದ್ದು ಎಂದು ಹೇಳುವುದಕ್ಕಿಂತ, ಅದರ ಬಳಕೆಗೆ ಮಿತಿ ಇರಬೇಕು ಎಂಬುದನ್ನು ಮಕ್ಕಳಿಗೆ ತಿಳಿಸಬೇಕು.

ಮಕ್ಕಳಲ್ಲಿ ಪ್ರೀತಿ, ಕರುಣೆ, ಸಹನೆ, ಶಿಸ್ತು, ಪ್ರಾಮಾಣಿಕತೆ, ಹಿರಿಯರ ಗೌರವ ಮತ್ತು ಪರಸ್ಪರ ಸಹಾಯದಂತಹ ಮೌಲ್ಯಗಳನ್ನು ಬೆಳೆಸುವುದು ಪೋಷಕರ ಮತ್ತು ಶಿಕ್ಷಕರ ಜವಾಬ್ದಾರಿಯಾಗಿದೆ. ಮಕ್ಕಳಿಗೆ ಕೇವಲ ಬುದ್ಧಿವಂತಿಕೆಯನ್ನು ಬೆಳೆಸಿದರೆ ಸಾಲದು; ಅವರಲ್ಲಿ ಮಾನವೀಯತೆಯೂ ಬೆಳೆಯಬೇಕು.

ಪೋಷಕರು ಮಕ್ಕಳಿಗೆ ಮೊಬೈಲ್ ಕೊಡಿಸುವುದರ ಜೊತೆಗೆ ಸಮಯವನ್ನೂ ಕೊಡಬೇಕು. ಮಕ್ಕಳೊಂದಿಗೆ ಮಾತನಾಡಬೇಕು, ಅವರ ಸಮಸ್ಯೆಗಳನ್ನು ಆಲಿಸಬೇಕು, ಪುಸ್ತಕ ಓದುವ ಹವ್ಯಾಸ ಬೆಳೆಸಬೇಕು ಮತ್ತು ಹೊರಾಂಗಣ ಆಟಗಳಿಗೆ ಪ್ರೋತ್ಸಾಹಿಸಬೇಕು. ಶಿಕ್ಷಕರು ಪಾಠದ ಜೊತೆಗೆ ಜೀವನ ಮೌಲ್ಯಗಳನ್ನೂ ಕಲಿಸಬೇಕು.

ಮಕ್ಕಳ ಕೈಯಲ್ಲಿ ಮೊಬೈಲ್ ಇರಲಿ, ಆದರೆ ಮನಸ್ಸಿನಲ್ಲಿ ಮಾನವೀಯತೆ ಇರಲಿ. ತಂತ್ರಜ್ಞಾನ ಬೆಳೆಯಲಿ, ಆದರೆ ಸಂಸ್ಕಾರ ಮರೆಯಾಗದಿರಲಿ. ಮಕ್ಕಳು ಮೊಬೈಲ್ಗೆ ದಾಸರಾಗದೆ, ಮೊಬೈಲ್ ಅನ್ನು ಜ್ಞಾನದ ಸಾಧನವನ್ನಾಗಿ ಬಳಸಲಿ.

ಏಕೆಂದರೆ, ಮಕ್ಕಳಿಗೆ ನಾವು ನೀಡುವ ಅತ್ಯುತ್ತಮ ಉಡುಗೊರೆ ದುಬಾರಿ ಮೊಬೈಲ್ ಅಲ್ಲ; ಉತ್ತಮ ಸಂಸ್ಕಾರ, ಮಾನವೀಯ ಮೌಲ್ಯಗಳು ಮತ್ತು ಪ್ರೀತಿಯಿಂದ ಕೂಡಿದ ಬದುಕು.



ಬನ್ನಿ, ಮಕ್ಕಳ ಕೈಯಲ್ಲಿ ಮೊಬೈಲ್ ಇದ್ದರೂ ಅವರ ಹೃದಯದಲ್ಲಿ ಮಾನವೀಯತೆಯ ಬೆಳಕು ಸದಾ ಬೆಳಗುವಂತೆ ಮಾಡೋಣ.

ಶರಣಬಸವ ನೀಲಗಲ್‌ಕರ್
ಗಣಿತ ಶಿಕ್ಷಕರು.ರಾಯಚೂರು

ಈಶಾನ್ಯ ಶಿಕ್ಷಕರ ಮತಕ್ಷೇತ್ರದ ಚುನಾವಣೆ: ಆಳಂದ ತಾಲೂಕಿನಲ್ಲಿ ಶೇ.88.93ರಷ್ಟು ಮತದಾನ

ಆಳಂದ:


ವಿಧಾನ ಪರಿಷತ್ ಪ್ರವೇಶಕ್ಕಾಗಿ ನಡೆಯುತ್ತಿರುವ ಈಶಾನ್ಯ ಶಿಕ್ಷಕರ ಮತಕ್ಷೇತ್ರದ ಚುನಾವಣೆಯಲ್ಲಿ ಆಳಂದ ತಾಲೂಕಿನ ಶಿಕ್ಷಕರು ಶುಕ್ರವಾರ ಉತ್ಸಾಹದಿಂದ ಪಾಲ್ಗೊಂಡು ತಮ್ಮ ಹಕ್ಕು ಚಲಾಯಿಸಿದರು.

ಶುಕ್ರವಾರ ಬೆಳಗ್ಗೆ 8 ಗಂಟೆಯಿಂದಲೇ ಮತದಾನ ಪ್ರಕ್ರಿಯೆ ಆರಂಭವಾಗಿದ್ದು, ಪಟ್ಟಣ ಹಾಗೂ ಗ್ರಾಮೀಣ ಭಾಗದ ವಿವಿಧ ಮತಗಟ್ಟೆಗಳಲ್ಲಿ ಶಿಕ್ಷಕರು ಸರತಿ ಸಾಲಿನಲ್ಲಿ ನಿಂತು ಮತ ಚಲಾಯಿಸಿದರು. ಆಳಂದ ಪಟ್ಟಣದ ಹಳೆ ತಹಸೀಲ್ದಾರ್ ಕಚೇರಿ ಸೇರಿದಂತೆ ವಿವಿಧ ಮತಗಟ್ಟೆಗಳಲ್ಲಿ ಬೆಳಗ್ಗೆಯಿಂದಲೇ ಮತದಾನ ಚಟುವಟಿಕೆಗಳು ಗರಿಗೆದರಿದ್ದವು. ಶಿಕ್ಷಕರು ಅಗತ್ಯ ಗುರುತಿನ ಚೀಟಿಗಳನ್ನು ಹಾಜರುಪಡಿಸಿ ಮತದಾನ ಪ್ರಕ್ರಿಯೆಯಲ್ಲಿ ಭಾಗವಹಿಸಿದರು.

ಮತದಾನದ ವಿವರ: ಆಳಂದ ಹಳೆ ತಹಶೀಲ್ದಾರ್ ಕಚೇರಿ ಮತಗಟ್ಟೆಯಲ್ಲಿ ಶೇ. 90.22, ಖಜೂರಿಯಲ್ಲಿ ಶೇ. 89.26, ಮಾದನಹಿಪ್ಪರಗಾದಲ್ಲಿ ಶೇ. 92.44, ನರೋಣಾದಲ್ಲಿ ಶೇ. 89.58 ಹಾಗೂ ನಿಂಬರ್ಗಾದಲ್ಲಿ ಶೇ. 83.49ರಷ್ಟು ಮತದಾನ ದಾಖಲಾಗಿದೆ.

ಆಳಂದ ತಾಲೂಕಿನಲ್ಲಿ ಒಟ್ಟಾರೆ ಶೇ. 88.93ರಷ್ಟು ಮತದಾನವಾಗಿದ್ದು, ಶಿಕ್ಷಕರು ಉತ್ಸಾಹದಿಂದ ಮತದಾನದಲ್ಲಿ ಪಾಲ್ಗೊಂಡರು. ತಾಲೂಕಿನ ವಿವಿಧ ಮತಗಟ್ಟೆಗಳಲ್ಲಿ ಶಾಂತಿಯುತವಾಗಿ ಮತದಾನ ಪ್ರಕ್ರಿಯೆ ನಡೆಯಿತು.

ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆ : ಚಿತ್ತಾಪುರ, ವಾಡಿಯಲ್ಲಿ ಶೇ. 84.38ರಷ್ಟು ಮತದಾನ



ಚಿತ್ತಾಪುರ:

ವಿಧಾನ ಪರಿಷತ್ತಿನ ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆಯ ಹಿನ್ನೆಲೆಯಲ್ಲಿ ಚಿತ್ತಾಪುರ ಹಾಗೂ ವಾಡಿ ಪಟ್ಟಣಗಳಲ್ಲಿ ಬೆಳಗ್ಗೆಯಿಂದಲೇ ಮತದಾನ ಚುರುಕುಗೊಂಡಿತು. ಶಿಕ್ಷಕರು ಸರತಿ ಸಾಲಿನಲ್ಲಿ ನಿಂತು ಉತ್ಸಾಹದಿಂದ ಮತ ಚಲಾಯಿಸಿದ್ದು, ಮತದಾನ ಪ್ರಕ್ರಿಯೆ ಶಾಂತಿಯುತವಾಗಿ ನಡೆಯಿತು.

ಪರಿಷತ್ ಚುನಾವಣೆಯ ಕಾಂಗ್ರೆಸ್ ಅಭ್ಯರ್ಥಿ ಶರಣಪ್ಪ ಮಟ್ಟೂರ್ ಅವರು ಮತಗಟ್ಟೆಗಳಿಗೆ ಭೇಟಿ ನೀಡಿ ಚುನಾವಣಾ ಪ್ರಕ್ರಿಯೆಯನ್ನು ವೀಕ್ಷಿಸಿದರು.

ಮತಗಟ್ಟೆಗಳ ಬಳಿ ಕಾಂಗ್ರೆಸ್ ಹಾಗೂ ಬಿಜೆಪಿ ಪಕ್ಷಗಳ ಮುಖಂಡರು, ಕಾರ್ಯಕರ್ತರು ಮತ್ತು ಬೆಂಬಲಿಗರು ಮಾಹಿತಿ ಕೇಂದ್ರಗಳನ್ನು ಸ್ಥಾಪಿಸಿ, ಶಿಕ್ಷಕರಿಗೆ ಅಗತ್ಯ ಮಾಹಿತಿ ನೀಡುವುದರ ಜೊತೆಗೆ ಅಂತಿಮ ಹಂತದಲ್ಲಿ ಮತದಾರರನ್ನು ಮನವೊಲಿಸುವ ಪ್ರಯತ್ನ ನಡೆಸುತ್ತಿರುವುದು ಕಂಡುಬಂತು.

ಮತದಾನದ ವಿವರ: ಚಿತ್ತಾಪುರ ಪಟ್ಟಣದಲ್ಲಿ ಒಟ್ಟು 176 ಮತದಾರರಿದ್ದು, ಅವರಲ್ಲಿ 148 ಮಂದಿ ಮತ ಚಲಾಯಿಸಿದ್ದಾರೆ. ಈ ಮೂಲಕ ಶೇ. 84.09ರಷ್ಟು ಮತದಾನವಾಗಿದೆ. ವಾಡಿ ಪಟ್ಟಣದಲ್ಲಿ ಒಟ್ಟು 125 ಮತದಾರರ ಪೈಕಿ 106 ಮಂದಿ ಮತ ಚಲಾಯಿಸಿದ್ದು, ಶೇ. 84.80ರಷ್ಟು ಮತದಾನವಾಗಿದೆ ಎಂದು ತಿಳಿದುಬಂದಿದೆ.

ಚಿತ್ತಾಪುರ ಮತ್ತು ವಾಡಿ ಪಟ್ಟಣಗಳೆರಡನ್ನೂ ಸೇರಿಸಿ ಒಟ್ಟು 301 ಮತದಾರರ ಪೈಕಿ 254 ಮಂದಿ ಮತ ಚಲಾಯಿಸಿದ್ದು, ಶೇ. 84.38ರಷ್ಟು ಮತದಾನವಾಗಿದೆ ಎಂದು ತಹಶೀಲ್ದಾರ್ ನಾಗಯ್ಯ ಹಿರೇಮಠ ತಿಳಿಸಿದ್ದಾರೆ.

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ: ನೋಂದಣಿಗೆ ಸೂಚನೆ

ಕಲಬುರಗಿ:

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ (ಕರಾಮುವಿ) ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ದೇಶದ ವಿವಿಧ ಬ್ಯಾಂಕಿಂಗ್, ಎಸ್?ಎಸ್?ಸಿ ಹಾಗೂ ಆರ್?ಆರ್?ಬಿ ಹುದ್ದೆಗಳ ನೇಮಕಾತಿಗೆ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 45 ದಿನಗಳ ತರಬೇತಿ ನೀಡಲು ನಿರ್ಧರಿಸಲಾಗಿದೆ.

ಆಸಕ್ತರು 2026ರ ಅಕ್ಟೋಬರ್ 31ರೊಳಗೆ ಬೆಳಗ್ಗೆ 10ರಿಂದ ಸಂಜೆ 4 ಗಂಟೆಯವರೆಗೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ 08212515944 ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸಬಹುದು ಎಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಮ್ಮೂರು ಸುದ್ದಿ

ಸಂಪಾದಕೀಯ



ಅಮೆರಿಕದ ದಬ್ಬಾಳಿಕೆ-ಮೋದಿ ಸರ್ಕಾರದ ಮೌನ; ಭಾರತದ ಸಾರ್ವಭೌಮತ್ವಕ್ಕೆ ಶೋಭೆಯಲ್ಲ!

ತನ್ನ ಹಿತಾಸಕ್ತಿಗಾಗಿ ಭಾರತದ ಇಂಧನ, ವ್ಯಾಪಾರ ಹಾಗೂ ವಿದೇಶಾಂಗ ನೀತಿಗಳನ್ನು ನಿಯಂತ್ರಿಸಲು ಹೊರಟಿದೆ ಅಮೆರಿಕ. ಟ್ರಂಪ್ ಆಡಳಿತದ ಆರ್ಥಿಕ ದಬ್ಬಾಳಿಕೆಗೆ ತಲೆಬಾಗುತ್ತಿರುವ ಮೋದಿ ಸರ್ಕಾರ, ಭಾರತದ ಸಾರ್ವಭೌಮತ್ವವನ್ನೇ ಒತ್ತೆಯಿಡುತ್ತಿದೆ!

ಅಮೆರಿಕಕ್ಕೆ ಭಾರತದ ಸ್ನೇಹ ಬೇಕು. ಆದರೆ, ಅದು ಸಮಾನ ಗೌರವದ ಸ್ನೇಹವಲ್ಲ. ತನ್ನ ಮಾತಿಗೆ ತಲೆಯಾಡಿಸುವ, ತನ್ನ ಆಜ್ಞೆಯನ್ನು ತಲೆಬಾಗಿ, ಶಿರಸಾ ಪಾಲಿಸುವ ಸ್ನೇಹ ಅರ್ಥಾತ್ ಅಡಿಯಾಳು. ತನ್ನ ಹಿತಾಸಕ್ತಿಗೆ ಅನುಗುಣವಾಗಿ ವ್ಯಾಪಾರ ಮಾಡುವ, ತಾನು ಸೂಚಿಸಿದ ದೇಶದಿಂದ ತೈಲ ಖರೀದಿಸುವ, ತಾನು ವಿರೋಧಿಸಿದ ದೇಶದೊಂದಿಗಿನ ಸಂಬಂಧ ಕಡಿದುಕೊಳ್ಳುವ ಭಾರತವನ್ನು ಅಮೆರಿಕ ಬಯಸುತ್ತಿದೆ. ಭಾರತವು ಸ್ವತಂತ್ರವಾಗಿ ವಿದೇಶಾಂಗ ನಿರ್ಧಾರಗಳನ್ನು ತೆಗೆದುಕೊಳ್ಳಬಾರದು, ಭಾರತದ ಪ್ರತಿ ನಿರ್ಧಾರದಲ್ಲಿಯೂ ತನ್ನ ನಿಯಂತ್ರಣ ಇರಬೇಕು ಎಂಬುದು ಟ್ರಂಪ್ ಆಡಳಿತದ ಅಮೆರಿಕದ ಧೋರಣೆ.

ಇದು ಅಕ್ಷರಶಃ ಆರ್ಥಿಕ ಬಲಪ್ರಯೋಗ. ಆದರೆ, ಈ ದಬ್ಬಾಳಿಕೆಯನ್ನು ಪ್ರಧಾನಿ ಮೋದಿ ಒಪ್ಪಿಕೊಳ್ಳುತ್ತಿದ್ದಾರೆ ಮತ್ತು ಪಾಲಿಸುತ್ತಿದ್ದಾರೆ. ಇದು ಭಾರತ ಮತ್ತು ಭಾರತೀಯರ ದುರದೃಷ್ಟ. ಇದನ್ನು, ಇತ್ತೀಚಿನ, ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರ ಭೇಟಿ ಸಾಬೀತು ಮಾಡಿದೆ.

ರುಬಿಯೊ ಅವರು ದೆಹಲಿಗೆ ಬಂದು ರಾಜತಾಂತ್ರಿಕ ಮಾತುಕತೆ ನಡೆಸದೆ, ನೇರವಾಗಿ ಮುಂಬೈಗೆ ಬಂದಿಳಿದರು. ಅವರಿದ್ದಲ್ಲಿಗೆ ನಮ್ಮ ವಿದೇಶಾಂಗ ಸಚಿವ ಜೈ ಶಂಕರ್ ಓಡೋಡಿ ಹೋದರು. ರುಬಿಯೋ ಅವರು ಮುಂಬೈನ ವ್ಯಾಪಾರ ಕೇಂದ್ರಗಳು, ಜಾಮ್‌ನಗರದ ತೈಲ ಸಂಸ್ಕರಣಾ ಸಂಕೀರ್ಣಗಳಿಗೆ ಭೇಟಿ ನೀಡಿದರು. ಯಾಕೆಂದರೆ, ಅಮೆರಿಕದ ಆದ್ಯತೆಗಳು ಈ ಆರ್ಥಿಕ ಕೇಂದ್ರಗಳೇ ಆಗಿವೆ. ಮಾತ್ರವಲ್ಲ, ಇದು ಅಮೆರಿಕದ ವಿದೇಶಾಂಗ ನೀತಿಯಲ್ಲಿ ಭಾರತದ ಸ್ಥಾನ ಏನು ಎಂಬುದರ ಜೊತೆಗೆ, ಅಮೆರಿಕಕ್ಕೆ ಭಾರತ ಬೇಕಿರುವುದು ಭಾರತದ ಅಭಿವೃದ್ಧಿಗಾಗಿಯಲ್ಲ; ಅಮೆರಿಕದ ಅಗತ್ಯಗಳನ್ನು ಪೂರೈಸುವುದಕ್ಕಾಗಿ ಎಂಬುದನ್ನು ಬಯಲುಮಾಡಿದೆ.

ಕಳೆದ ವರ್ಷ ರಷ್ಯಾದಿಂದ ಕಡಿಮೆ ಬೆಲೆಗೆ ಕಚ್ಚಾತೈಲ ಖರೀದಿಸಿದ್ದಕ್ಕಾಗಿ ಭಾರತದ ಸರಕುಗಳ ಮೇಲೆ ಅಮೆರಿಕ ದಂಡಾತ್ಮಕ ಸುಂಕ ವಿಧಿಸಿತು. ಭಾರತದ ಇಂಧನ ಭದ್ರತೆಯ ಕುರಿತು ಆಗ ಟ್ರಂಪ್ ಸರ್ಕಾರಕ್ಕೆ ಕಾಳಜಿ ಇರಲಿಲ್ಲ. ಭಾರತೀಯ ಗ್ರಾಹಕರು ತೆರಬೇಕಾದ ಬೆಲೆ, ರೈತರು ಎದುರಿಸುವ ಉತ್ಪಾದನಾ ವೆಚ್ಚ, ದೇಶದ ಕೈಗಾರಿಕೆಗಳ ಸಂಕಷ್ಟ ಯಾವುದೂ ಮುಖ್ಯವಾಗಿರಲಿಲ್ಲ.

ಆದರೆ ಈಗ ಅಮೆರಿಕದ ಲೆಕ್ಕಾಚಾರ ಬದಲಾಗಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಇಂಧನ ಪೂರೈಕೆಯ ಅನಿಶ್ಚಿತತೆ ಹೆಚ್ಚಾಗಿರುವ ಮತ್ತು ಅಮೆರಿಕದಲ್ಲಿ ಡೀಸೆಲ್ ದರದ ಒತ್ತಡ ತಗ್ಗಿಸಬೇಕಿರುವ ಒತ್ತಡ ಅಮೆರಿಕಕ್ಕಿದೆ. ಅದಕ್ಕಾಗಿ, ವೆನೆಜುವೆಲಾದ ಭಾರವಾದ ಕಚ್ಚಾತೈಲ ಸಂಸ್ಕರಿಸಲು ಭಾರತದ ರಿಫೈನರಿಗಳ ಸಾಮರ್ಥ್ಯ ಬೇಕಾಗಿದೆ. ಹೀಗಾಗಿ ನಿನ್ನೆ ನಿರ್ಬಂಧದ ಬೆದರಿಕೆ ಹಾಕಿದ ಅಮೆರಿಕವೇ ಇಂದು ಭಾರತದ ತೈಲ ಸಂಸ್ಕರಣಾ ಸಾಮರ್ಥ್ಯವನ್ನು ಕೊಂಡಾಡುತ್ತಿದೆ. ಇದು ಅಮೆರಿಕದ ಅನುಕೂಲಸಿಂಧು ನೀತಿಯಲ್ಲದೆ ಮತ್ತೇನು?

ಭಾರತವು ತೈಲವನ್ನು ರಷ್ಯಾ, ಅಮೆರಿಕ ವೆನೆಜುವೆಲಾ ಅಥವಾ ಯಾರಿಂದ ಖರೀದಿಸಬೇಕು ಎಂಬುದನ್ನು ನಿರ್ಧರಿಸಬೇಕಾದವರು ಭಾರತೀಯರು. ಬೆಲೆ, ಗುಣಮಟ್ಟ, ಪೂರೈಕೆಯ ಭದ್ರತೆ ಮತ್ತು ದೇಶದ ಆರ್ಥಿಕ ಅಗತ್ಯಗಳೇ ಈ ನಿರ್ಧಾರಕ್ಕೆ ಆಧಾರವೂ ಆಗಿರಬೇಕು.

ಆದರೆ, ರುಬಿಯೊ ಅವರು ರಷ್ಯಾದ ಕಚ್ಚಾ ತೈಲ ಬದಲಿಗೆ, ವೆನೆಜುವೆಲಾದ ತೈಲವನ್ನು ಖರೀದಿಸುವಂತೆ ಭಾರತಕ್ಕೆ ಕೇಳಿದ್ದಾರೆ, ಅಲ್ಲ, ತಾಕೀತು ಮಾಡಿದ್ದಾರೆ. ಈ ಧೋರಣೆಯು ತಾನು ಹೇಳಿದಂತೆ ನಡೆದುಕೊಂಡರೆ ಸಹಕಾರ. ಇಲ್ಲದಿದ್ದರೆ ಸುಂಕ, ನಿರ್ಬಂಧ, ಹಣಕಾಸಿನ ಒತ್ತಡ ಹೇರುವ ಅಮೆರಿಕದ ದಾರ್ಷ್ಟ್ಯವನ್ನು ತೋರುತ್ತದೆ. ಮೋದಿ ಸರ್ಕಾರವೂ ಅದಕ್ಕೆ ತಲೆಯಾಡಿಸುತ್ತಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಭಾರತವನ್ನು ವಿಶ್ವಗುರು ಎಂದು ಬಿಂಬಿಸಿಕೊಳ್ಳುತ್ತಾರೆ. ಜಾಗತಿಕ ವೇದಿಕೆಗಳಲ್ಲಿ ಭಾರತದ ಗೌರವ ಹೆಚ್ಚಿದೆ ಎಂದು ಹೇಳಿಕೊಳ್ಳುತ್ತಾರೆ. ವಿದೇಶಿ ನಾಯಕರೊಂದಿಗಿನ ಆಪ್ತತೆಯನ್ನು ರಾಜತಾಂತ್ರಿಕ ಸಾಧನೆಯಂತೆ ಸಾಮಾಜಿಕ ಜಾಲತಾಣಗಳಲ್ಲಿ ಪ್ರಚಾರ ಮಾಡುತ್ತಾರೆ.

ಆದರೆ, ರಾಷ್ಟ್ರದ ಸಾರ್ವಭೌಮತ್ವವು ಇಂತಹ ಪ್ರಚಾರಗಳಿಂದ ಸಾಬೀತಾಗುವುದಿಲ್ಲ. ಬಲಿಷ್ಠ ರಾಷ್ಟ್ರವೊಂದು ಅನ್ಯಾಯದ ಷರತ್ತುಗಳನ್ನು ಮುಂದಿಟ್ಟಾಗ ಅವುಗಳನ್ನು ಎದುರಿಸುವ ದೃಢತೆಯಲ್ಲಿಯೇ ನಿಜವಾದ ರಾಜತಾಂತ್ರಿಕ ಸಾಮರ್ಥ್ಯ ಅಡಗಿದೆ. ಇದನ್ನು ಮೋದಿ ಮರೆತಿದ್ದಾರೆ.

ಟ್ರಂಪ್ ಸರ್ಕಾರ ಭಾರತದ ಸರಕುಗಳ ಮೇಲೆ ದಂಡಾತ್ಮಕ ಸುಂಕ ವಿಧಿಸಿದಾಗ ಮೋದಿ ಸರ್ಕಾರ ಅದಕ್ಕೆ ತಕ್ಕ ರಾಜಕೀಯ ಉತ್ತರ ನೀಡಬೇಕಿತ್ತು. ಭಾರತದ ಇಂಧನ ಖರೀದಿಯ ಸ್ವಾತಂತ್ರ್ಯವನ್ನು ಪ್ರಶ್ನಾತೀತವಾಗಿ ಸಮರ್ಥಿಸಬೇಕಿತ್ತು. ಆದರೆ, ಪ್ರಧಾನಿ ಮೋದಿ ಈ ಎರಡನ್ನೂ ಮಾಡಲಿಲ್ಲ. ಬದಲಾಗಿ, ಮೋದಿ ಸರ್ಕಾರದ ಪ್ರತಿಕ್ರಿಯೆಗಳು ಅಮೆರಿಕದೊಂದಿಗೆ ಸಂಬಂಧ ಹದಗೆಡಬಾರದೆಂಬ ಆತಂಕದಿಂದಲೇ ಕೂಡಿದ್ದವು. ಆದರೂ, ಭಾರತದ ಮೇಲೆ ಅಮೆರಿಕ ಬಲಪ್ರಯೋಗ ನಡೆಸುತ್ತಿದೆಯೇ ಹೊರತು, ರಾಜತಾಂತ್ರಿಕ ಸೌಹಾರ್ದತೆ ತೋರುತ್ತಿಲ್ಲ.

ಇರಾನ್‌ಗೆ ಔಷಧ ಸಾಗಿಸುವ ವಿಷಯದಲ್ಲಿ ಭಾರತ ತೆಗೆದುಕೊಂಡಿರುವ ನಿರ್ಧಾರ ಮತ್ತು ತಳೆದಿರುವ ಧೋರಣೆಯೂ ಇದೇ ಸಮಸ್ಯೆಯ ಮತ್ತೊಂದು ಮುಖವಾಗಿದೆ. ಅಮೆರಿಕದ ನಿರ್ಬಂಧಗಳ ಬೆದರಿಕೆಗೆ ಹೆದರಿರುವ ಭಾರತವು, ಇಲ್ಲಿ ಇರಾನ್ ಖರೀದಿಸಿರುವ ಔಷಧಗಳನ್ನು ಕೊಂಡೊಯ್ಯಲು ಇರಾನ್‌ನ ವಿಮಾನಗಳ ಲ್ಯಾಂಡಿಂಗ್‌ಗೆ ಅವಕಾಶ ಕೊಡುತ್ತಿಲ್ಲ. ಪರ್ಯಾಯ ದಾರಿಗಳನ್ನು ಹುಡುಕಿಕೊಂಡು, ಔಷಧ ಕೊಂಡೊಯ್ಯುವಂತೆ ಇರಾನ್‌ಅನ್ನು ಭಾರತ ಕೇಳಿದೆ. ಅಂದರೆ, ತನ್ನ ನೆಲದಲ್ಲಿ ಯಾವ ವಿಮಾನ ಇಳಿಯಬೇಕು ಎಂಬುದನ್ನೂ ಮೋದಿ ಸರ್ಕಾರವು ಅಮೆರಿಕದ ಆಣತಿಯಂತೆ ನಿರ್ಧರಿಸುತ್ತಿದೆ.

ಅಮೆರಿಕದ ಏಕಪಕ್ಷೀಯ ನಿರ್ಬಂಧಗಳು ಭಾರತದ ಮಾನವೀಯ ನೆರವು ಮತ್ತು ವ್ಯಾಪಾರ ಸಂಬಂಧಗಳನ್ನು ನಿಯಂತ್ರಿಸುತ್ತಿದೆ. ಅಮೆರಿಕ ತನ್ನ ಹಿತಾಸಕ್ತಿಯನ್ನು ಕಾಪಾಡಲು ಎಲ್ಲ ಮಾರ್ಗಗಳನ್ನು ಬಳಸುತ್ತಿದೆ. ಆದರೆ, ಭಾರತ ತನ್ನ ಹಿತಾಸಕ್ತಿಯ ಹೆಸರಿನಲ್ಲಿ ಸ್ವತಂತ್ರ ಮತ್ತು ಸಾರ್ವಭೌಮತ್ವವನ್ನು ಮರೆದು ಅಮೆರಿಕದ ಕಟ್ಟುಪಾಡುಗಳಿಗೆ ತಲೆ ಬಾಗುತ್ತಿದೆ.

ಭಾರತ ಮತ್ತು ಅಮೆರಿಕ ನಡುವೆ ತಂತ್ರಜ್ಞಾನ, ರಕ್ಷಣಾ ಉತ್ಪಾದನೆ, ಕೃತಕ ಬುದ್ಧಿಮತ್ತೆ ಹಾಗೂ ಸೆಮಿಕಂಡಕ್ಟರ್ ಕ್ಷೇತ್ರಗಳಲ್ಲಿ ಸಹಕಾರ ಬೆಳೆಯುತ್ತಿರುವುದು ನಿಜ. ಈ ಸಹಕಾರದಿಂದ ಭಾರತಕ್ಕೆ ಪ್ರಯೋಜನಗಳೂ ಇರಬಹುದು. ಆದರೆ, ಅವುಗಳ ಹೆಸರಿನಲ್ಲಿ ವಿದೇಶಾಂಗ ಸ್ವಾಯತ್ತತೆಯನ್ನು ಒತ್ತೆಯಿಡುವುದು ರಾಜತಾಂತ್ರಿಕ ಜಾಣ್ಮೆಯೇ? ಖಂಡಿತಾ ಅಲ್ಲ, ಇದು ದಡ್ಡತನ!

ಅಮೆರಿಕ ನಮ್ಮ ಮಾರುಕಟ್ಟೆಯನ್ನು ಬಳಸಿಕೊಳ್ಳಬಹುದು. ನಮ್ಮ ತಂತ್ರಜ್ಞರನ್ನು ನೇಮಿಸಿಕೊಳ್ಳಬಹುದು. ನಮ್ಮ ರಿಫೈನರಿಗಳಿಂದ ಪ್ರಯೋಜನ ಪಡೆಯಬಹುದು. ಆದರೆ, ನಮ್ಮ ಇಂಧನ ಖರೀದಿಯ ನಿರ್ಧಾರಗಳ ಮೇಲೆ ನಿಯಂತ್ರಣ ಹೇರಲು ಹೊರಟರೆ ಅದನ್ನು ಒಪ್ಪಿಕೊಳ್ಳಲಾಗದು.

ಭಾರತದ ಕೃಷಿ ಮಾರುಕಟ್ಟೆ, ಸಣ್ಣ ಕೈಗಾರಿಕೆಗಳು, ಔಷಧ ಉದ್ಯಮ ಹಾಗೂ ಕಾರ್ಮಿಕರ ಹಿತಾಸಕ್ತಿಗಳನ್ನು ಬಲಿಕೊಟ್ಟು ಅಮೆರಿಕದ ಮಾರುಕಟ್ಟೆಯನ್ನು ತೃಪ್ತಿಪಡಿಸುವ ವ್ಯಾಪಾರ ಒಪ್ಪಂದಕ್ಕೂ ಸಹಿ ಹಾಕಲು ಮೋದಿ ಸರ್ಕಾರ ಮುಂದಾಗಿದೆ. ಇದು ಸಹಕಾರವಲ್ಲ, ಅಕ್ಷರಶಃ ದೇಶದ ಹಿತಾಸಕ್ತಿಗಳೊಂದಿಗೆ ಮಾಡಿಕೊಂಡ ರಾಜಿ.

ಭಾರತದ ವಿದೇಶಾಂಗ ನೀತಿಗೆ ಸ್ವಾತಂತ್ರ್ಯ ಹೋರಾಟದಿಂದ ಬೆಳೆದುಬಂದ ಐತಿಹಾಸಿಕ ಪರಂಪರೆಯಿದೆ. ವಸಾಹತುಶಾಹಿಯ ವಿರುದ್ಧ ಹೋರಾಡಿದ ದೇಶವಿದು. ಅಲಿಪ್ತ ಚಳವಳಿಯ ಮೂಲಕ ಜಾಗತಿಕ ಶಕ್ತಿಗಳ ಪ್ರಾಬಲ್ಯವನ್ನು ಪ್ರಶ್ನಿಸಿದ ದೇಶವಿದು. ಅಮೆರಿಕದ ನೆಲದಲ್ಲಿಯೇ ಅಮೆರಿಕಗೆ ಸವಾಲು ಹಾಕಿ, ಧೀಮಂತ ನಾಯಕತ್ವ ತೋರಿದ ಇಂದಿರಾ ಗಾಂಧಿ ಮುನ್ನಡೆಸಿದ್ದ ನಾಡಿದು. ಆ ಪರಂಪರೆಯ ಅರಿವು ಪ್ರಧಾನಿ ಮೋದಿಗೆ ಇದ್ದಂತಿಲ್ಲ!

ರಷ್ಯಾ, ಚೀನಾ, ಇರಾನ್ ಅಥವಾ ಅಮೆರಿಕ ಯಾವುದೇ ರಾಷ್ಟ್ರದೊಂದಿಗೆ ಭಾರತದ ಸಂಬಂಧವು ಭಾರತದ ಜನರ ಹಿತಾಸಕ್ತಿಯನ್ನು ಆಧರಿಸಿರಬೇಕು. ಯಾರೊಬ್ಬರ ರಾಜಕೀಯ ಆಜ್ಞೆಯನ್ನು ಆಧರಿಸಿರಬಾರದು. ಭಾರತದ ಸಾರ್ವಭೌಮತ್ವ ಕೇವಲ ಗಡಿಗಳ ರಕ್ಷಣೆಗೆ ಸಂಬಂಧಿಸಿದ್ದಲ್ಲ. ದೇಶದ ಆರ್ಥಿಕ ನಿರ್ಧಾರಗಳು, ಇಂಧನ ಭದ್ರತೆ, ವ್ಯಾಪಾರ ಸಂಬಂಧಗಳು ಹಾಗೂ ರಾಜತಾಂತ್ರಿಕ ಆಯ್ಕೆಗಳ ಮೇಲಿನ ಸ್ವತಂತ್ರ ಅಧಿಕಾರಕ್ಕೂ ಸಂಬಂಧಿಸಿದೆ. ಇದನ್ನು ಮೋದಿ ಸರ್ಕಾರ ಮರೆಯಬಾರದು.

ಭಾರತ ಯಾರ ಸಾಮಂತ ರಾಷ್ಟ್ರವೂ ಅಲ್ಲ. ಟ್ರಂಪ್ ಅವರ ಆದೇಶ ಪಾಲಿಸಲು ಭಾರತೀಯರು ಮೋದಿ ಸರ್ಕಾರಕ್ಕೆ ಅಧಿಕಾರ ನೀಡಿಲ್ಲ. ಭಾರತಕ್ಕೆ ಅಮೆರಿಕದ ಸ್ನೇಹ ಬೇಕೇ ಹೊರತು ಅದರ ಯಜಮಾನಿಕೆಯಲ್ಲ. ಈ ವ್ಯತ್ಯಾಸವನ್ನು ಅಮೆರಿಕಗೆ ಸ್ಪಷ್ಟವಾಗಿ ತಿಳಿಸುವುದು ಮೋದಿ ಸರ್ಕಾರದ ಕರ್ತವ್ಯ.

ಮೋದಿ ಪ್ರಚಾರ, ರಾಹುಲ್ ವ್ಯಕ್ತಿತ್ವ ಮತ್ತು ರೆಜಿಮ್ ಚೇಂಜ್



ಮೋದಿ ಅನುಭವಿ ನಟನಂತೆ, ಪ್ರದರ್ಶಕನಂತೆ ಕಾಣುತ್ತಾರೆ. ರಾಹುಲ್ ಗಾಂಧಿ ಪಾತ್ರದ ಒಳಹೊಕ್ಕು ನಟಿಸುವ ಕಲಾವಿದನಂತೆ ಕಾಣುತ್ತಾರೆ. ಈ ನಿಟ್ಟಿನಲ್ಲಿ ರಾಹುಲ್ ರಾಜಕೀಯ ನಡೆಗಳು ಮೋದಿಯವರ ರಾಜಕೀಯ ನಡೆಗಳೊಂದಿಗೆ ವಿಶ್ಲೇಷಣೆಗೊಳಗಾಗುತ್ತಿವೆ. ಕಳೆದ 12 ವರ್ಷಗಳ ಆಡಳಿತ, ಸುಧಾರಿಸದ ಜನರ ಜೀವನಮಟ್ಟವೇ ಹೊಸ ನಾಯಕನತ್ತ ನೋಡುತ್ತಿದೆ. ವ್ಯವಸ್ಥೆಯ ಬದಲಾವಣೆ ಎಂಬ ವಿಶ್ಲೇಷಣೆಗೂ ಕಾರಣವಾಗಿದೆ.

ದೇಶದಲ್ಲಿ ಸದ್ಯಕ್ಕೆ ವ್ಯವಸ್ಥೆಯ ಬದಲಾವಣೆ ಕುರಿತು ಚರ್ಚೆಯಾಗುತ್ತಿದೆ. ಅಂದರೆ, ಚಾಲ್ತಿಯಲ್ಲಿರುವ ಸಾಂಸ್ಥಿಕ ವ್ಯವಸ್ಥೆಯನ್ನು ಸಂಪೂರ್ಣವಾಗಿ ಹೊಸ ರೂಪಕ್ಕೆ ತರುವುದಕ್ಕಾಗಿ. ಅದರಲ್ಲೂ ರಾಜಕೀಯ ಮತ್ತು ಆಡಳಿತ ವ್ಯವಸ್ಥೆಯಲ್ಲಿ ಬದಲಾವಣೆ ತರಲಿಕ್ಕಾಗಿ. ಅಂದರೆ, ದೇಶದ ಆಡಳಿತ ಪ್ರಕ್ರಿಯೆ, ಕಾನೂನು ರಚನೆ ಮತ್ತು ಸಾರ್ವಜನಿಕ ಸೇವೆಗಳನ್ನು ಹೆಚ್ಚು ಪಾರದರ್ಶಕ, ಜವಾಬ್ದಾರಿಯುತ ಮತ್ತು ಜನಸ್ನೇಹಿಯನ್ನಾಗಿ ಮಾಡಲು ಬೇಕಾದ ಮೂಲಭೂತ ಮಾರ್ಪಾಡುಗಳಿಗಾಗಿ.

ಇದು ದೆಹಲಿಯ ಜೆನ್ ಜೀ ಹೋರಾಟದ ಫಲ. ಇದು ದೇಶದಾದ್ಯಂತ ಚಾಲ್ತಿಗೆ ಬರುತ್ತಿದ್ದಂತೆ, ಆಡಳಿತಾರೂಢ ಬಿಜೆಪಿಯಿಂದ ಮತ್ತೊಮ್ಮೆ ವ್ಯಕ್ತಿತ್ವಹರಣದ ಪ್ರಚಾರಾಂದೋಲನ ಶುರುವಾಗಿದೆ. ನಿನ್ನೆ ನವದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿಯವರು, ಜಗತ್ತು ಹೊಸ ವ್ಯವಸ್ಥೆಯತ್ತ ಸಾಗುತ್ತಿದ್ದರೆ, ದೇಶದಲ್ಲಿ ಕೆಲವರು ಅವ್ಯವಸ್ಥೆಯ ಕನಸು ಕಾಣುತ್ತಿದ್ದಾರೆ ಎಂದು ಕುಟುಕಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ, ಪ್ರತಿಭಟನೆಗಳು ಮತ್ತು ಧರಣಿಗಳಿಂದ ಏನನ್ನೂ ಸಾಧಿಸಲು ಸಾಧ್ಯವಿಲ್ಲ. ಬಿಜೆಪಿ ಮುಂದಿನ 30 ವರ್ಷಗಳ ಕಾಲ ಅಧಿಕಾರದಲ್ಲಿರಲಿದೆ. ಪ್ರತಿಪಕ್ಷಗಳ ನಕಾರಾತ್ಮಕ ರಾಜಕಾರಣವು, ಅವು ಮತ್ತೆ ಅಧಿಕಾರಕ್ಕೆ ಬರುವುದನ್ನು ತಡೆಯಲಿದೆ ಎಂದಿದ್ದಾರೆ.

ಇದಕ್ಕೆ ಪೂರಕವಾಗಿ ಯುರೋಪ್ ಸೇರಿದಂತೆ ಜಗತ್ತಿನಾದ್ಯಂತ ನಡೆಯುತ್ತಿರುವ ಪ್ರತಿಭಟನೆಗಳನ್ನು ಉಲ್ಲೇಖಿಸಿದ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್, ಅತೃಪ್ತಿ ಮತ್ತು ಅವ್ಯವಸ್ಥೆಯನ್ನು ಸೃಷ್ಟಿಸಲು ವಿವಿಧ ಶಕ್ತಿಗಳು ಕೆಲಸ ಮಾಡುತ್ತಿವೆ. ಆಡಳಿತ ಬದಲಾವಣೆಯ ಷಡ್ಯಂತ್ರಕ್ಕೆ ಬಲಿಯಾಗಬಾರದು. ಸರ್ಕಾರ ಉರುಳಿಸುವ ಶಕ್ತಿಗಳಿಗೆ ಭಾರತದಲ್ಲಿ ಜಾಗವಿಲ್ಲ ಎಂದಿದ್ದಾರೆ.

ಅಂದರೆ, ಪ್ರಧಾನಿ ಮೋದಿ, ಗೃಹ ಮಂತ್ರಿ ಅಮಿತ್ ಶಾ ಮತ್ತು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರ ಬುಡಕ್ಕೆ ಬಿಸಿ ನೀರು ಬಿದ್ದಿದೆ. ಪ್ರತಿಯಾಗಿ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಮೇಲೆ ದಾಳಿ ಶುರುವಾಗಿದೆ.

ಭಾರತದ ರಾಜಕೀಯ ಇತಿಹಾಸದಲ್ಲಿ ಆಡಳಿತಾರೂಢ ವ್ಯವಸ್ಥೆಯಿಂದ ಇಷ್ಟೊಂದು ವ್ಯಾಪಕವಾಗಿ, ಇಷ್ಟೊಂದು ತೀವ್ರವಾದ ದ್ವೇಷ ಮತ್ತು ನಿಂದನೆಗೆ ಬೇರೆ ಯಾವ ರಾಜಕಾರಣಿಯೂ ಗುರಿಯಾಗಿಲ್ಲ. ಕಳೆದ 12 ವರ್ಷಗಳಿಂದ ರಾಹುಲ್ ಗಾಂಧಿ ಅವರನ್ನು ಅಪಹಾಸ್ಯ ಮತ್ತು ತಿರಸ್ಕಾರದ ತಿಪ್ಪೆಗೆ ಹಾಕಿ ತುಳಿಯುವ ಉದ್ದೇಶದಿಂದ ಬೃಹತ್ ಪ್ರಮಾಣದ ಪ್ರಚಾರಾಂದೋಲನ ನಡೆಸಲಾಗಿದೆ. ರಾಜಕೀಯವಾಗಿ ಮಾತ್ರವಲ್ಲ, ರೂಪಕದ ಮೂಲಕ ಅವರನ್ನು ಕೊಲ್ಲುವ ಎಲ್ಲ ಪ್ರಯತ್ನಗಳನ್ನೂ ಮಾಡಲಾಗಿದೆ. ಈ ಪ್ರಯತ್ನದ ಭಾಗವಾಗಿ, ಅವರನ್ನು ದ್ವೇಷಕ್ಕೆ ಅರ್ಹವಾದ ವ್ಯಕ್ತಿಯಾಗಿ, ಏನನ್ನೂ ಸಾಧಿಸಲಾಗದ ಅಸಮರ್ಥ ರಾಜಕಾರಣಿಯಾಗಿ, ಅವರ ಇಡೀ ರಾಜಕೀಯ ಪಯಣವು ವಂಶಪಾರಂಪರ್ಯ ಅಧಿಕಾರ ಮತ್ತು ಸವಲತ್ತುಗಳಿಂದಲೇ ರೂಪಿಸಲ್ಪಟ್ಟದ್ದೆಂದು ಬಿಂಬಿಸುವ ಹೊಣೆಯನ್ನು ಮುಖ್ಯವಾಹಿನಿಯ ಮಡಿಲ ಮಾಧ್ಯಮಗಳಿಗೆ ವಹಿಸಿಕೊಡಲಾಗಿದೆ.

ಇದರಿಂದಾಗಿ, ಮೋದಿಯವರ ಅತ್ಯಂತ ಕಟು ಟೀಕಾಕಾರರು ಕೂಡ, ರಾಹುಲ್ ಗಾಂಧಿಯವರ ಬಗ್ಗೆ ಒಂದು ಒಳ್ಳೆಯ ಮಾತು ಆಡಲು, ಆಡಿದ್ದನ್ನು ಕೇಳಿಸಿಕೊಳ್ಳಲು ಸಿದ್ಧರಿರಲಿಲ್ಲ. ಅಷ್ಟೇ ಅಲ್ಲ, ಅವರು ಪಪ್ಪು, ಜೀವನಪೂರ್ತಿ ಹಾಗೆಯೇ ಉಳಿಯುತ್ತಾರೆ ಎಂಬುದು ಎಲ್ಲೆಡೆ ಕೇಳಿಬರುತ್ತಿದ್ದ ಸಾಮಾನ್ಯ ಅಭಿಪ್ರಾಯವಾಗಿತ್ತು. ಉನ್ನತ ಮಟ್ಟದ ಗಣ್ಯರಿಂದ ಹಿಡಿದು ಬೀದಿಯ ಸಾಮಾನ್ಯ ಜನರವರೆಗೆ- ಬಹುತೇಕ ಎಲ್ಲರ ಅಭಿಪ್ರಾಯವೂ ಇದೇ ಆಗಿತ್ತು. ಇದು ರಾಹುಲ್ ಗಾಂಧಿಯವರಿಗೆ ತಿಳಿಯದ ಸಂಗತಿಯೇನಲ್ಲ. ಒಮ್ಮೆ ತಮ್ಮ ವ್ಯಕ್ತಿತ್ವಕ್ಕೆ ಕಳಂಕ ತರಲು ಒಂದು ಮಿಲಿಯನ್ ಡಾಲರ್ ಖರ್ಚು ಮಾಡಲಾಗಿದೆ ಎಂದು ಕೂಡ ಹೇಳಿದ್ದರು.

ಇಷ್ಟರ ನಡುವೆಯೂ, ರಾಹುಲ್ ಗಾಂಧಿಯವರನ್ನು ಅಷ್ಟು ಸುಲಭವಾಗಿ ತಳ್ಳಿಹಾಕುವುದು ತಪ್ಪು, ಅವರು ಪ್ರಚಾರಾಂದೋಲನದ ಬಲಿಪಶು, ಅವರ ಬಗ್ಗೆ ಪ್ರಾಮಾಣಿಕವಾದ ಅಭಿಪ್ರಾಯ ರೂಪಿಸಿಕೊಳ್ಳಲು ನಮ್ಮ ಪೂರ್ವಗ್ರಹದ ಕನ್ನಡಕಗಳನ್ನು ತೆಗೆದಿಡಬೇಕು ಎಂದು ಕೆಲವರಾದರೂ ನಂಬಿದ್ದರು. ಆದರೆ ಅವರನ್ನೂ ಅಣಕಿಸಿ ಅಪಹಾಸ್ಯ ಮಾಡಲಾಗುತ್ತಿತ್ತು.

ಆದರೆ ಈಗ ಕಾಲ ಬದಲಾಗಿದೆ. ಇಂದು ರಾಹುಲ್ ಗಾಂಧಿಯವರನ್ನು ಭರವಸೆಯ ಬೆಳಕಾಗಿ ನೋಡಲಾಗುತ್ತಿದೆ. ಅವರು ಮೋದಿ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವ ಸಮರ್ಥ ನಾಯಕ ಎಂಬ ಅಭಿಪ್ರಾಯವೂ ವ್ಯಕ್ತವಾಗುತ್ತಿದೆ.

ಭಾರತೀಯ ರಾಜಕಾರಣಕ್ಕೆ ಮೋದಿ ಸರ್ಕಾರ ನೀಡಿದ ಬಹಳ ಮುಖ್ಯ ಕೊಡುಗೆಗಳಲ್ಲಿ ಪ್ರಚಾರಾಂದೋಲನದ ವ್ಯಾಪಕ ಬಳಕೆಯೂ ಒಂದು. ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ತನ್ನ ಸ್ಥಾಪನೆಯ ಕಾಲದಿಂದಲೂ ಪ್ರಚಾರವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಬಂದಿದೆ. ಸದ್ಯದ ಸಂದರ್ಭದಲ್ಲಿ ಇದು ಇನ್ನಷ್ಟು ತೀವ್ರತೆ ಪಡೆದಿದೆ.

ವಾಸ್ತವವಾಗಿ, ಪ್ರಚಾರದ ಮೂಲಕ ರಾಹುಲ್ ಗಾಂಧಿಯವರನ್ನು ಸಾರ್ವಜನಿಕ ಅಪಹಾಸ್ಯದ ತಿಪ್ಪೆಗುಂಡಿಗೆ ತಳ್ಳುವ ಮೊದಲು, ದೇಶದ ಭವಿಷ್ಯವನ್ನೇ ಬದಲಿಸಬಲ್ಲ ಉದ್ಧಾರಕನಂತೆ ನರೇಂದ್ರ ಮೋದಿಯವರನ್ನು ನಮ್ಮ ಮುಂದೆ ಪ್ರಸ್ತುತಪಡಿಸಲಾಗಿತ್ತು. ಗುಜರಾತ್ ಗಲಭೆಗಳ ಕಾಲದಲ್ಲಿ ಖಳನಾಯಕನಂತೆ ಕಾಣಲಾಗುತ್ತಿದ್ದ ವ್ಯಕ್ತಿಯನ್ನು ಪ್ರಚಾರದ ಮೂಲಕವೇ ದೇಶದ ಭವಿಷ್ಯವನ್ನು ಬದಲಿಸುವ ನಾಯಕನನ್ನಾಗಿ ಪ್ರತಿಷ್ಠಾಪಿಸಲಾಗಿತ್ತು. ಒಬ್ಬ ಸಾಮಾನ್ಯನನ್ನು ನಾಯಕೋತ್ತಮನನ್ನಾಗಿ ರೂಪಿಸಬಹುದು ಎಂಬುದಕ್ಕೆ ಮೋದಿ ಒಂದು ಸ್ಪಷ್ಟ ಉದಾಹರಣೆಯಾಗಿತ್ತು.

ರಾಹುಲ್ ಗಾಂಧಿಯವರನ್ನು ಪಪ್ಪು ಎಂದು ಬಿಂಬಿಸಲು ಕೋಟ್ಯಂತರ ರೂಪಾಯಿಗಳನ್ನು ಖರ್ಚು ಮಾಡಿದ್ದರೆ, ಅಷ್ಟೇ ಪ್ರಮಾಣದ ಅಥವಾ ಅದಕ್ಕಿಂತ ಹಲವು ಪಟ್ಟು ಹೆಚ್ಚಿನ ಹಣ ಮತ್ತು ಸಂಪನ್ಮೂಲಗಳನ್ನು ಬಳಸಿ ಮೋದಿಯವರನ್ನು ದೈವಿಕ ವ್ಯಕ್ತಿಯಾಗಿ, ಆರಾಧನಾಮೂರ್ತಿಯಾಗಿ, ಸಮರ್ಥ ನಾಯಕನಾಗಿ ರೂಪಿಸಲಾಯಿತು. ಈ ಪ್ರಚಾರದ ಆಟದಲ್ಲಿ ಅವರು ಗೆಲುವು ಪಡೆದರು ಎಂಬುದನ್ನು ನಿರಾಕರಿಸಲಾಗದು.

ಮೋದಿಯವರ ವ್ಯಕ್ತಿತ್ವದ ಬಿಂಬ ಎಷ್ಟು ಪ್ರಭಾವಶಾಲಿಯಾಗಿ ರೂಪಿಸಲ್ಪಟ್ಟಿತ್ತೆಂದರೆ, ವಿಚಾರವಂತರು, ಗಣ್ಯರು ಮತ್ತು ಪತ್ರಕರ್ತರು ಕೂಡ ಅವರ ಮೋಹಕ್ಕೆ ಒಳಗಾಗಿದ್ದರು. ಸಣ್ಣಪುಟ್ಟ ಟೀಕೆಗಳಿಗೂ ಸಿಡಿದೇಳುವ ಸ್ಥಿತಿ ರೂಢಿಸಿಕೊಂಡಿದ್ದರು.

ಇದು ಮೋದಿಯವರ ವ್ಯಕ್ತಿತ್ವವನ್ನು ಕೀಳಾಗಿ ಕಾಣುವುದಾಗಲಿ, ರಾಹುಲ್ ಗಾಂಧಿಯವರನ್ನು ವೈಭವೀಕರಿಸುವುದಾಗಲಿ ಅಲ್ಲ. ಬದಲಿಗೆ, ಪ್ರಚಾರದ ಶಕ್ತಿ ಎಷ್ಟು ಪ್ರಬಲವಾಗಿದೆ ಮತ್ತು ಅದು ಜನರ ವಿವೇಚನೆಯನ್ನು ಹೇಗೆ ಮಸುಕಾಗಿಸಲಿದೆ ಎಂಬುದನ್ನು ಹೇಳುವುದಾಗಿದೆ.

ಪ್ರಚಾರದ ಮೂಲಕವೇ ನಾಯಕನಾದ ಮೋದಿ

ಏಕೆಂದರೆ, ಮೋದಿಯವರ ವ್ಯಕ್ತಿತ್ವದ ಬಿಂಬವನ್ನು ಕೃತಕವಾಗಿ ರೂಪಿಸಲಾಗಿದೆ. ಈ ಪ್ರಕ್ರಿಯೆಯಲ್ಲಿ ಒಬ್ಬ ಸಮರ್ಥ ಸಂವಹನಕಾರರಾಗಿ ಅವರ ಪ್ರತಿಭೆ ನಿರ್ಣಾಯಕ ಪಾತ್ರ ವಹಿಸಿದೆ. ಇದರಲ್ಲಿ ಎರಡು ಮಾತಿಲ್ಲ. ಇದಕ್ಕೆ ವಿರುದ್ಧವಾಗಿ, ಸಂವಹನವೇ ರಾಹುಲ್ ಗಾಂಧಿಯವರ ಬಹುದೊಡ್ಡ ದೌರ್ಬಲ್ಯವಾಗಿದೆ. ಆದರೆ ಕಾಲಕ್ರಮೇಣ ರಾಹುಲ್ ಹೊಸ ಸಂವಹನ ವಿಧಾನವೊಂದನ್ನು ಬೆಳೆಸಿಕೊಳ್ಳುವ ಮೂಲಕ ಆ ಕೊರತೆಯನ್ನು ಸರಿದೂಗಿಸಿಕೊಂಡಿದ್ದಾರೆ.

ರಾಹುಲ್ ಗಾಂಧಿ ಈಗ ಕಾಂಗ್ರೆಸ್‌ನ ಒಬ್ಬ ಸಂಸದ ಮತ್ತು ನಾಯಕ ಎನ್ನುವುದನ್ನು ಹೊರತುಪಡಿಸಿದರೆ, ಕಾಂಗ್ರೆಸ್ ಅಧ್ಯಕ್ಷ ಇತ್ಯಾದಿ ಏನೂ ಅಲ್ಲ. ಆದರೆ, ಪಾರ್ಲಿಮೆಂಟ್‌ನಲ್ಲಿ ಅವರು ಸಂವಿಧಾನವನ್ನು ಎತ್ತಿ ಹಿಡಿದು ಮಾಡಿದ ಸತ್ಯ ಪ್ರತಿಜ್ಞೆ ಮತ್ತು ಸತ್ಯಪ್ರತಿಜ್ಞೆಗೆ ಅವರ ಹೆಸರನ್ನು ಕೂಗಿ ಕರೆದಾಗ ಇಡೀ ಪಾರ್ಲಿಮೆಂಟ್‌ನಲ್ಲಿ ಅವರ ಪರ ಕೇಳಿದ ಜಯಕಾರವೇ ಆ ವ್ಯಕ್ತಿಯನ್ನು ನಾಯಕನನ್ನಾಗಿ ನೋಡಿದೆ.

ಇನ್ನು ಭಾರತ್ ಜೋಡೋ ಯಾತ್ರೆ, ಭಾರತ್ ಜೋಡೋ ನ್ಯಾಯ ಯಾತ್ರೆ ಸಹಿತ ಅನೇಕ ಸಂದರ್ಭಗಳಲ್ಲಿ ನೂರಕ್ಕೂ ಅಧಿಕ ಬಾರಿ ಪತ್ರಿಕಾಗೋಷ್ಠಿ ನಡೆಸಿ, ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರಿಸುವ ಮೂಲಕ ನೇರ ನಿಷ್ಠುರ ನಾಯಕನನ್ನಾಗಿ ರೂಪಿಸಿದೆ.

ಛಾತ್ರೋಂ ಕಿ ಗೂಂಜ್ (ವಿದ್ಯಾರ್ಥಿಗಳ ಧ್ವನಿ) ಕಾರ್ಯಕ್ರಮವು ಅವರ ಈ ಹೊಸ ಸಂವಹನ ವಿಧಾನಕ್ಕೆ ಒಂದು ಉತ್ತಮ ಉದಾಹರಣೆ. ಬಹುಶಃ ಅವರ ತಂಡವು ಅವರಲ್ಲಿದ್ದ ಮಿತಿಗಳನ್ನು ಅರಿತುಕೊಂಡಿದೆ. ಪ್ರಸ್ತುತಿ, ಗ್ರಾಫಿಕ್ಸ್, ಚಿತ್ರಗಳು ಮತ್ತು ದೃಶ್ಯಗಳ ಮೂಲಕ ಸಂವಹನ ನಡೆಸುವ ಒಂದು ಹೊಸ ಮಾದರಿಯನ್ನು ಅದು ರೂಪಿಸಿದೆ. ಸರ್ಕಾರದಿಂದ ಅನ್ಯಾಯಕ್ಕೊಳಗಾದವರ ಕಥೆಗಳನ್ನು ಹೇಳಲು ಸಂತ್ರಸ್ತರನ್ನು ಈ ಕಾರ್ಯಕ್ರಮದಲ್ಲಿ ಬಳಸಿಕೊಳ್ಳಲಾಗುತ್ತಿದೆ.

ಈ ಪ್ರಯತ್ನದಲ್ಲಿ ರಾಹುಲ್ ಗಾಂಧಿ ಕೇವಲ ವಕ್ತಾರನಾಗಿ ಕಾಣಿಸಿಕೊಳ್ಳುವುದಿಲ್ಲ. ಬದಲಿಗೆ, ಕಥನ ಕಟ್ಟುವ ಸೂತ್ರಧಾರನಾಗಿ ಕಾಣಿಸಿಕೊಳ್ಳುತ್ತಾರೆ. ಅವರು ಕುರ್ಚಿಯಲ್ಲಿ ಕುಳಿತುಕೊಳ್ಳದೆ, ಘನ-ಗಾಂಭೀರ್ಯತೆ ತೋರದೆ, ಮೈಕ್ ಹಿಡಿದು ವೇದಿಕೆಯಲ್ಲಿ ಓಡಾಡುತ್ತಾ ಜನರೊಂದಿಗೆ ಬೆರೆಯುತ್ತಾರೆ. ಕಠಿಣವಾದ ಗಣಿತ ಸೂತ್ರವೊಂದನ್ನು ಬಿಡಿಸಿ ವಿವರಿಸುವ ಪ್ರಾಧ್ಯಾಪಕರಂತೆ ವಿಷಯಗಳನ್ನು ನಿರೂಪಿಸುತ್ತಾರೆ.

ಮೋದಿ ಮಾತನಾಡುವಾಗ ಸಂವಹನ ಮಾಧ್ಯಮ ಮತ್ತು ವಿಷಯ ಎರಡರ ಮೇಲೂ ಸಂಪೂರ್ಣ ಹಿಡಿತ ಹೊಂದಿರುವ ವ್ಯಕ್ತಿಯಂತೆ ಕಾಣುತ್ತಾರೆ. ಆದರೆ ರಾಹುಲ್ ಗಾಂಧಿ ಕಥೆ ಹೇಳುವ ನಿರೂಪಕನಂತೆ ತಮ್ಮನ್ನು ತಾವು ಪ್ರಸ್ತುತಪಡಿಸಿಕೊಳ್ಳುತ್ತಾರೆ. ಮೋದಿಯವರು, ತಮ್ಮ ಧ್ವನಿಯಲ್ಲಿ ಹೆಚ್ಚು ಏರಿಳಿತಗಳನ್ನು ತರುತ್ತಾರೆ. ಆದರೆ ರಾಹುಲ್, ಸಮಚಿತ್ತದಿಂದ ಸರಳವಾಗಿ ಸ್ಪಷ್ಟವಾಗಿ ವಿವರಿಸುತ್ತಾರೆ.

ಮೋದಿ ಅನುಭವಿ ನಟನಂತೆ, ಪ್ರದರ್ಶಕನಂತೆ ಕಾಣುತ್ತಾರೆ. ರಾಹುಲ್ ಗಾಂಧಿ ಪಾತ್ರದ ಒಳಹೊಕ್ಕು ನಟಿಸುವ ಕಲಾವಿದನಂತೆ ಕಾಣುತ್ತಾರೆ. ಅವರು ಹೇಗಿದ್ದಾರೋ ಹಾಗೆಯೇ ಕಾಣಿಸಿಕೊಳ್ಳುತ್ತಾರೆ. ತಮ್ಮನ್ನು ಒಬ್ಬ ಸಾಮಾನ್ಯ ವ್ಯಕ್ತಿಯಂತೆ ಬಿಂಬಿಸಿಕೊಳ್ಳುತ್ತಾರೆ. ಒಂದು ರೀತಿಯಲ್ಲಿ, ಸವಲತ್ತುಗಳ ಹಿನ್ನೆಲೆಯಿಂದ ಬಂದ ರಾಜಕೀಯ ವಂಶಸ್ಥ ಎಂಬ ಮಿಥ್ ಒಡೆದುಹಾಕಲು ಪ್ರಯತ್ನಿಸುತ್ತಾರೆ. ಆ ನಿಟ್ಟಿನಲ್ಲಿ ಅವರು, ಸಾಮಾನ್ಯವಾಗಿ ರಾಜಕಾರಣಿಗಳು ಧರಿಸುವ ಖಾದಿ ಕುರ್ತಾ-ಪೈಜಾಮ ಬಿಟ್ಟು, ಟಿ-ಶರ್ಟ್ ಮತ್ತು ಸಡಿಲವಾದ ಪ್ಯಾಂಟ್‌ಗಳಲ್ಲಿ ಆರಾಮವಾಗಿರುತ್ತಾರೆ. ಟಿ-ಶರ್ಟ್ ಧರಿಸುವ ಮೂಲಕವೇ ಹೊಸ ರಾಜಕೀಯ ಸಂಸ್ಕೃತಿ ನೆಲೆಗೊಳಿಸಲು ಬಯಸುತ್ತಾರೆ.

ಒಂದು ಕಾಲದಲ್ಲಿ ಅವರ ಈ ಅಸಾಂಪ್ರದಾಯಿಕ ಸ್ವಭಾವವೇ ದೆಹಲಿಯ ರಾಜಕೀಯ ವಲಯದಲ್ಲಿ ಅವರ ವಿರುದ್ಧದ ಟೀಕೆಗಳಿಗೆ ಮತ್ತು ತಪ್ಪು ತಿಳಿವಳಿಕೆಗಳಿಗೆ ಕಾರಣವಾಗಿತ್ತು. ಆದರೆ ಇಂದು ಅದೇ ಗುಣ ಅವರ ಆಕರ್ಷಣೆ ಮತ್ತು ಚೈತನ್ಯದ ಮೂಲವಾಗುತ್ತಿದೆ. ಅದಕ್ಕೆ ಅತ್ಯುತ್ತಮ ಉದಾಹರಣೆಯಾಗಿ, ಜ್ಞಾನೇಶ್, ಕೆಲಸ ಮುಗಿದಿದೆ, ಬ್ರೋ ನೋಡಬಹುದು. ಅದು ಹೊಸ ತಲೆಮಾರಿನ ಜನರೊಂದಿಗೆ, ವಿಶೇಷವಾಗಿ ಜೆನ್ ಜೀಗಳೊಂದಿಗೆ ನೇರವಾಗಿ ಬೆರೆಯಲು ಸಾಧ್ಯ ಮಾಡಿದ ಬಗೆಯನ್ನು ಅವಲೋಕಿಸಬಹುದು.

ಸಂವಹನ ಕಲೆಯಲ್ಲಿ ನಿಪುಣರೆಂದು ಪರಿಗಣಿಸಲ್ಪಡುವ ಮೋದಿಯವರೇ ಇಂದಿನ ಹೊಸ ತಲೆಮಾರಿನ ಯುವಜನರೊಂದಿಗೆ ಸಂಪರ್ಕ ಬೆಳೆಸಲು ಹೆಣಗಾಡುತ್ತಿರುವುದು ಅಚ್ಚರಿಯ ಸಂಗತಿಯಲ್ಲ. ವ್ಯಕ್ತಿತ್ವ ರೂಪಿಸಿಕೊಳ್ಳುವುದು ಎಂದರೆ ಕೇವಲ ಸುಂದರವಾಗಿ ಮಾತನಾಡುವುದು, ಚೆನ್ನಾಗಿ ಉಡುಪು ಧರಿಸುವುದು ಅಥವಾ ಇತರರನ್ನು ಆಕರ್ಷಿಸುವುದಲ್ಲ. ನಮ್ಮ ಆಲೋಚನೆ, ಮಾತು, ನಡವಳಿಕೆ, ಆತ್ಮವಿಶ್ವಾಸ ಮತ್ತು ಜೀವನದ ದೃಷ್ಟಿಕೋನವನ್ನು ಉತ್ತಮಗೊಳಿಸಿಕೊಳ್ಳುವುದು.

ಈ ನಿಟ್ಟಿನಲ್ಲಿ ರಾಹುಲ್ ಗಾಂಧಿಯವರ ರಾಜಕೀಯ ನಡೆಗಳು ಮೋದಿಯವರ ರಾಜಕೀಯ ನಡೆಗಳೊಂದಿಗೆ ವಿಶ್ಲೇಷಣೆಗೊಳಗಾಗುತ್ತಿವೆ. ಕಳೆದ 12 ವರ್ಷಗಳ ಆಡಳಿತ, ಸುಧಾರಿಸದ ಜನರ ಜೀವನಮಟ್ಟವೇ ಹೊಸ ನಾಯಕನತ್ತ ನೋಡುತ್ತಿದೆ. ವ್ಯವಸ್ಥೆಯ ಬದಲಾವಣೆ( ) ಎಂಬ ವಿಶ್ಲೇಷಣೆಗೂ ಕಾರಣವಾಗಿದೆ. ಇದು ಭಾರತದ ರಾಜಕಾರಣದ ದಿಕ್ಕನ್ನು ನಿರ್ಧರಿಸಬಲ್ಲದೇ, ಕಾದು ನೋಡಬೇಕು.

ಜಾಮಿಯಾ ಮಿಲಿಯಾ ವಿವಿಯಲ್ಲಿ 'ವಿದ್ಯಾರ್ಥಿ ಸಂಘ'ದ ಚುನಾವಣೆಗಾಗಿ ಪ್ರತಿಭಟನೆ: ಬೆಂಬಲ ನೀಡಿದ್ದ ಕಾಂಗ್ರೆಸ್, ಎಸ್‌ಪಿ

ದೆಹಲಿಯ ಜಾಮಿಯಾ ಮಿಲಿಯಾ ಇಸ್ಲಾಮಿಯಾ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿ ಸಂಘದ () ಚುನಾವಣೆಯನ್ನು ಪ್ುನ'ರಾ'ರ'ಂಭಿಸ'ಬೇ'ಕ'ು, ಪ'ೂರ್ಣ ಪ'್ರ'ವ'ಾಣ ದ' ವೇಳಾಪಟ್ಟಿಯನ್ನು ತಕ್ಷಣವೇ ಪ್ರಕಟಿಸಬೇಕು ಎಂದು ಆಗ್ರಹಿಸಿ ವಿದ್ಯಾರ್ಥಿಗಳು ಅನಿರ್ದಿಷ್ಟಾವಧಿ ಧರಣಿ ನಡೆಸುತ್ತಿದ್ದಾರೆ. ಈ ಪ್ರತಿಭಟನೆಯನ್ನು ಬೆಂಬಲಿಸಲು ವಿಶ್ವವಿದ್ಯಾಲಯದ ಕ್ಯಾಂಪಸ್‌ಗೆ ತೆರಳಿದ್ದ ಕಾಂಗ್ರೆಸ್ ಸಂಸದ ಇಮ್ರಾನ್ ಮಸೂದ್ ಮತ್ತು ಸಮಾಜವಾದಿ ಪಾರ್ಟಿ (ಎಸ್‌ಪಿ) ಸಂಸದ ಮೊಹಿಬುಲ್ಲಾ ನದ್ವಿ ಅವರನ್ನು ದೆಹಲಿ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.

ಅಕ್ಟೋಬರ್ 12ರಿಂದ ಪ್ರತಿಭಟನೆ ಆರಂಭಿಸಿರುವ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಆವರಣದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯ ಮರುಸ್ಥಾಪನೆಗೆ ಒತ್ತಾಯಿಸುತ್ತಿದ್ದಾರೆ. ಜಾಮಿಯಾ ಮಿಲಿಯಾ ವಿಶ್ವವಿದ್ಯಾಲಯದಲ್ಲಿ 2006ರಲ್ಲಿ ವಿದ್ಯಾರ್ಥಿ ಸಂಘವನ್ನು ವಿ ಸ' ರ್ಜಿ ಸ' ಲಾ ಗಿ ದ' ್ದ, 2005ರಿಂದೀಚೆಗೆ ಯಾವುದೇ ಚುನಾವಣೆಗಳು ನಡೆದಿಲ್ಲ. ಪ್ರಜಾಸತ್ತಾತ್ಮಕ ಪ್ರಾತಿನಿಧ್ಯದ ಕೊರತೆಯಿಂದಾಗಿ ಶೈಕ್ಷಣಿಕ ಸೌಲಭ್ಯಗಳು, ಹಾಸ್ಟೆಲ್ ವ್ಯವಸ್ಥೆ, ಹಾಜರಾತಿ ನಿಯಮಗಳು, ಸಂಶೋಧನಾ ವೇತನ ಹಾಗೂ ವಿದ್ಯಾರ್ಥಿವೇ ತ'ನ'ದ'ಂತ'ಹ' ಮೂಲಭೂತ ಸಮಸ್ಯೆಗಳನ್ನು ಆಡಳಿತ ಮಂಡಳಿಯ ಗಮನಕ್ಕೆ ತರಲು ವೇದಿಕೆಯಿಲ್ಲದಂತಾಗಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದ್ದಾರೆ.

ಪ್ರತಿಭಟನಾನಿರತ ವಿದ್ಯಾರ್ಥಿಗಳನ್ನು ಭೇಟಿ ಮಾಡಲು ಬಂದಿದ್ದ ಕಾಂಗ್ರೆಸ್ ಸಂಸದ ಇಮ್ರಾನ್ ಮಸೂದ್ ಅವರನ್ನು ಪೊಲೀಸರು ಆವರಣದ ಹೊರಭಾಗದಲ್ಲೇ ವಶಕ್ಕೆ ಪಡೆದರು. ವಿದ್ಯಾರ್ಥಿಗಳ ಬೇಡಿಕೆಗಳನ್ನು ಬೆಂಬಲಿಸಿ ಮಾತನಾಡಿದ ಮಸೂದ್, ''ವಿದ್ಯಾರ್ಥಿಗಳು ನಮ್ಮ ದೇಶದ ಭವಿಷ್ಯ. ಅವರ ಹಕ್ಕುಗಳನ್ನು ಹತ್ತಿಕ್ಕಲು ಪ್ರಯತ್ನಿಸಲಾಗುತ್ತಿದೆ. ವಿದ್ಯಾರ್ಥಿ ಸಂಘವನ್ನು ಪುನಃ ಸ್ಥಾಪಿಸಲು ಆಡಳಿತ ಮಂಡಳಿಗೆ ಏನು ಸಮಸ್ಯೆ'' ಎಂದು ಪ್ರಶ್ನಿಸಿದ್ದರು.

ಅದೇ ರೀತಿ, ಜಾಮಿಯಾ ವಿಶ್ವವಿದ್ಯಾಲಯದ ಹಳೆಯ ವಿದ್ಯಾರ್ಥಿಯೂ ಆಗಿರುವ ಸಮಾಜವಾದಿ ಪಾರ್ಟಿ ಸಂಸದ ಮೊಹಿಬುಲ್ಲಾ ನದ್ವಿ ಅವರನ್ನೂ ಪೊಲೀಸರು ದಾರಿಯಲ್ಲೇ ತಡೆದು ವಶಕ್ಕೆ ಪಡೆದುಕೊಂಡಿದ್ದು, ನಂತರ ಬಿಡುಗಡೆ ಮಾಡಿದ್ದಾರೆ.

ಪರಿಸ್ಥಿತಿಯನ್ನು ನಿಭಾಯಿಸಲು ವಿಶ್ವವಿದ್ಯಾಲಯ ಆಡಳಿತವು ಹೊಸ ವಿದ್ಯಾರ್ಥಿ ಸಂಘದ ಸಂವಿಧಾನ ರಚನೆಗೆ ಉನ್ನತ ಮಟ್ಟದ ಸಮಿತಿಯನ್ನು ರಚಿಸಿದೆ. ಆದರೂ, ಕೇವಲ ಸಮಿತಿ ರಚನೆಯಿಂದ ತೃಪ್ತರಾಗದ ವಿದ್ಯಾರ್ಥಿಗಳು ತಕ್ಷಣವೇ ಅಧಿಕೃತ ಚುನಾವಣೆ ದಿನಾಂಕ ಮತ್ತು ವೇಳಾಪಟ್ಟಿಯನ್ನು ಪ್ರಕಟಿಸಬೇಕು ಎಂದು ಪಟ್ಟು ಹಿಡಿದಿದ್ದಾರೆ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR